ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 50 2023

ಬುಧವಾರ, ಅಕ್ಟೋಬರ್ 18, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 156 RNI : 27369/75

janathavani@mac.com
www.janathavani.com
08192 254736 91642 99999




ದಾವಣಗೆರೆ, ಅ. 17 - ದಸರಾ ನಮ್ಮ ನಾಡ ಹಬ್ಬ. ಈ ಹಬ್ಬದಲ್ಲಿ ಹಲವಾರು ವಿಶೇಷತೆಗಳನ್ನು ಕಾಣಬಹುದು. ಅದರಲ್ಲಿ ಗೊಂಬೆ ಕೂರಿಸುವುದೂ ಒಂದು. ದಾವಣಗೆರೆ ವಿನೋಬನಗರದ 3ನೇ ಮೇನ್, 11ನೇ ಕ್ರಾಸ್‌ನಲ್ಲಿ ಶ್ರೀಮತಿ ಕೆ. ಚಂದ್ರಿಕಾ ಅವರು ಕಳೆದ 27 ವರ್ಷಗಳಿಂದ ತಮ್ಮ ಮನೆಯಲ್ಲಿ ಗೊಂಬೆ ಕೂರಿಸುತ್ತಿದ್ದಾರೆ.

ಪೋಸ್ಟ್ ಮಾಸ್ಟರ್ ಕೆಲಸ ಮಾಡುತ್ತಿದ್ದ ಚಂದ್ರಿಕಾ ಅವರು, ಪ್ರಸ್ತುತ ವಿಆರ್‌ಎಸ್ ತೆಗೆದುಕೊಂಡು ತಮ್ಮ ಮಗನೊಂದಿಗೆ ಧಾರವಾಡದಲ್ಲಿ ವಾಸವಾಗಿದ್ದಾರೆ. ಆದಾಗ್ಯೂ ನಮ್ಮೂರು ಎಂಬ ಅಭಿಮಾನದಿಂದ ಹತ್ತು ದಿನ ಮೊದಲೇ ದಾವಣಗೆರೆಯಲ್ಲಿನ ತಮ್ಮ ಸ್ವಂತ ಮನೆಗೆ ಬಂದು ಗೊಂಬೆ ಕೂರಿಸಿದ್ದಾರೆ. ಪುತ್ರ ಪವನ್ ಹಾಗೂ ಸೊಸೆ ಸುಷ್ಮಾ ಇವರಿಗೆ ಸಾಥ್ ನೀಡಿದ್ದಾರೆ.

ಪಾಡ್ಯದಂದು ಗೊಂಬೆ ಕೂರಿಸಿದ್ದು, ವಿಜಯದಶಮಿ ವರೆಗೂ ಪ್ರದರ್ಶನಕ್ಕಿಡಲಿದ್ದೇವೆ. ಪ್ರತಿ ವರ್ಷ ಸಾವಿರಕ್ಕೂ ಹೆಚ್ಚು ಜನರು ಗೊಂಬೆ ಪ್ರದರ್ಶನ ವೀಕ್ಷಿಸುತ್ತಿದ್ದಾರೆ. ಪ್ರತಿದಿನ 200ಕ್ಕೂ ಹೆಚ್ಚು ಜನರು ಬರುತ್ತಾರೆ. ಅದರಲ್ಲೂ ಶಾಲಾ ಮಕ್ಕಳೇ ಆಸಕ್ತಿಯಿಂದ ವೀಕ್ಷಣೆಗೆ ಬರುತ್ತಿದ್ದಾರೆ ಎನ್ನುತ್ತಾರೆ ಚಂದ್ರಿಕಾ. ಗೊಂಬೆ ಕೂರಿಸಲೆಂದೇ ಮನೆಯಲ್ಲಿ ಮಹಡಿಯಲ್ಲಿ ವ್ಯವಸ್ಥೆ ಮಾಡಿಕೊಂಡಿದ್ದೇವೆ. ಸುಮಾರು 4 ಸಾವಿರದಷ್ಟು ವಿವಿಧ ಬಗೆಯ ಗೊಂಬೆಗಳಿವೆ ಎಂದವರು ಹೇಳಿದರು.

## ಡಿಕೆಶಿ ಸಮ ಸ್ಥಾನಕ್ಕೆ ಜಾರಕಿಹೊಳಿ ಪಟ್ಟು

**ವರಿಷ್ಠರ ಮೇಲೆ ಒತ್ತಡ ತರಲು ಬಣ ರಾಜಕೀಯ**



ಬೆಂಗಳೂರು, ಅ. 17 - ರಾಜ್ಯ ಸರ್ಕಾರದಲ್ಲಿ ಡಿ.ಕೆ.ಶಿವಕುಮಾರ್‌ಗೆ ಸರಿಸಮನಾದ ಸ್ಥಾನಮಾನವನ್ನು ತಮಗೂ ನೀಡುವಂತೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿ ಹೊಳಿ ವರಿಷ್ಠರ ಮೇಲೆ ಒತ್ತಡ ತರಲು ಬಣ ರಾಜಕೀಯ ಆರಂಭಿಸಿದ್ದಾರೆ.

ಮುಂಬೈ ಕರ್ನಾಟಕದ ಪಕ್ಷದ 20ಕ್ಕೂ ಹೆಚ್ಚು ಶಾಸಕರನ್ನು ಬೆನ್ನಿಗೆ ಕಟ್ಟಿಕೊಂಡು ಉಪ ಮುಖ್ಯಮಂತ್ರಿ ಹುದ್ದೆಗಾಗಿ ಲಾಬಿ ಆರಂಭಿಸಿದ್ದಾರೆ.

ಶಿವಕುಮಾರ್ ಅವರಿಗೆ ಸಿಕ್ಕಿರುವ ಸ್ಥಾನಮಾನಗಳನ್ನು ನೀವು ಪಡೆಯಲೇಬೇಕು ಎಂದು ಜಾರಕಿಹೊಳಿ ಕುಟುಂಬವು ಸತೀಶ್ ಅವರನ್ನು ಹುರಿದುಂಬಿಸಿದೆ.

ಅವರ ಕುಟುಂಬದಲ್ಲೇ ಇಬ್ಬರು ವಿಧಾನಸಭಾ ಬಿಜೆಪಿ ಸದಸ್ಯರು, ಒಬ್ಬರು ವಿಧಾನ ಪರಿಷತ್ತಿನ ಪಕ್ಷೇತರ ಸದಸ್ಯರಿದ್ದು, ಇಡೀ ಬೆಳಗಾವಿ ಜಿಲ್ಲೆಯಲ್ಲಿ ಸಂಪೂರ್ಣ ಹಿಡಿತ ಸಾಧಿಸಿಕೊಂಡಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಅವರ ಸಂಪುಟದಲ್ಲಿ ಪ್ರಬಲ ಖಾತೆ ಹೊಂದಿದ್ದ ರಮೇಶ್ ಜಾರಕಿಹೊಳಿ ಅವರು ಅತ್ಯಾಚಾರ ಆರೋಪದ ಪ್ರಕರಣದಲ್ಲಿ ಅಧಿಕಾರ ಕಳೆದುಕೊಳ್ಳಬೇಕಾಯಿತು.

ಅಧಿಕಾರ ಕಳೆದುಕೊಳ್ಳಲು ಶಿವಕುಮಾರ್ ನಡೆಸಿದ ಹನಿಟ್ರ್ಯಾಪ್ ಕಾರಣವೆಂದು ಅವರ ಕುಟುಂಬ ರಾಜಕೀಯವಾಗಿ ಹಾಲಿ ಉಪ ಮುಖ್ಯಮಂತ್ರಿ ವಿರುದ್ಧ ಸಿಡಿದೆದ್ದಿದೆ. ಶಿವಕುಮಾರ್ ಪ್ರಮುಖ ಹುದ್ದೆಗಳನ್ನು ಪಡೆದು ಸರ್ಕಾರದಲ್ಲಿ ಮುಖ್ಯಮಂತ್ರಿಗೆ ಸಮನಾಗಿ ಅಧಿಕಾರ ನಡೆಸುತ್ತಿರುವುದು ಈ ಕುಟುಂಬಕ್ಕೆ ಸಹಿಸಲಾಗುತ್ತಿಲ್ಲ.

ಶಿವಕುಮಾರ್ ಅಷ್ಟೇ, ಪಕ್ಷ ಸಂಘಟನೆ ಹಾಗೂ ಒಂದು ಸಮುದಾಯದ ಬೆಂಬಲ ಇರುವಾಗ ಅವರಿಗೆ ನೀಡಿರುವ ಸಮಾನಾಂತರ ಹುದ್ದೆ ಪಡೆದುಕೊಳ್ಳಬೇಕು ಎಂದು ಜಾರಕಿಹೊಳಿ ಸಹೋದರರು ಪಟ್ಟು ಹಿಡಿದಿದ್ದಾರೆ. ಪಟ್ಟುಹಿಡಿದಿರುವುದರ ಜತೆಗೆ ಸತೀಶ್ ಜಾರಕಿಹೊಳಿಗೆ ಬೆಂಬಲವಾಗಿ ನಿಲ್ಲಲು ಮುಂಬೈ ಕರ್ನಾಟಕ ಭಾಗದ ಕಾಂಗ್ರೆಸ್ ಶಾಸಕರ ತಂಡವನ್ನೇ ರಚಿಸಿ ವರಿಷ್ಠರ ಮೇಲೆ ಒತ್ತಡ ತರಿಸಿದ್ದಾರೆ.

ಸಾರ್ವಜನಿಕವಾಗಿ ತಮ್ಮ ಹೋರಾಟ ಬಹಿರಂಗಗೊಳ್ಳಬೇಕು ಎಂದೇ ವಿಶ್ವ ವಿಖ್ಯಾತ ದಸರಾ ಮಹೋತ್ಸವ ನೋಡಲೆಂದೇ ಬೆಳಗಾವಿಯಿಂದ ಮೈಸೂರಿಗೆ ಸತೀಶ್ ನೇತೃತ್ವದಲ್ಲಿ ಶಾಸಕರ ತಂಡ ಪ್ರವಾಸ ಕೈಗೊಳ್ಳುವ ಯೋಜನೆ ರೂಪಿಸಿದ್ದರು. ಈ ವಿಷಯ ತಿಳಿಯುತ್ತಿದ್ದಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, (4ನೇ ಪುಟಕ್ಕೆ)

## ಭದ್ರಾ ಬಲದಂಡೆ ನಾಲೆ ನೀರು ಬಂದ್ 7 ದಿನಗಳ ನಂತರ ನೀರು ಸಾಧ್ಯತೆ



ಮಲೇಬೆನ್ನೂರು, ಅ.17- ಭದ್ರಾ ಜಲಾಶಯದಿಂದ ಬಲದಂಡೆ ನಾಲೆಗೆ ಹರಿಸುತ್ತಿದ್ದ ನೀರನ್ನು ಮಂಗಳವಾರ ಸಂಜೆ 6 ಗಂಟೆಗೆ ಬಂದ್ ಮಾಡಲಾಗಿದೆ.

ಮೂಲಗಳ ಪ್ರಕಾರ ಮಂಗಳವಾರದಿಂದ ಅ.23 ರವರೆಗೆ 7 ದಿನ ನಾಲೆಯಲ್ಲಿ ನೀರು ಬಂದ್ ಮಾಡಿ, ಅ.24 ರಿಂದ ನ. 20 ರವರೆಗೆ ಒಟ್ಟು 25 ದಿವಸ ನೀರು ಹರಿಸುವ ಸಾಧ್ಯತೆ ಇದೆ. ಈ ಹಿಂದಿನ ಕಾಡಾ ಸಮಿತಿಯ ತೀರ್ಮಾನದಂತೆ ಆಫ್ ಅಂಡ್ ಆನ್ ಪದ್ಧತಿ ಪ್ರಕಾರವೇ ಈಗ ನೀರನ್ನು ಆಫ್ ಮಾಡಲಾಗಿದೆ.

ಭತ್ತದ ಬೆಳೆ ಈಗ ಕಾಳು ಕಟ್ಟುವ ಹಂತದಲ್ಲಿರುವುದರಿಂದ ನೀರು ಬಂದ್ ಮಾಡದೇ ಸತತವಾಗಿ ನಾಲೆಯಲ್ಲಿ ನೀರು ಹರಿಸಬೇಕೆಂಬ ಒತ್ತಾಯ ಅಚ್ಚುಕಟ್ಟಿನ ಭತ್ತದ ಬೆಳೆಗಾರರಿಂದ ಕೇಳಿ ಬಂದಿತ್ತು. ಅಲ್ಲದೆ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಹರಿಹರ ಕ್ಷೇತ್ರದ ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್ ಕೂಡಾ ನಾಲೆಯಲ್ಲಿ ಸತತವಾಗಿ ನೀರು ಹರಿಸುವಂತೆ ಜಲ ಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ಅವರಿಗೆ ಒತ್ತಡ ಹಾಕಿದ್ದರು.

ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಬಿಜೆಪಿ ಮುಖಂಡ ಲೋಕಿಕೆರೆ ನಾಗರಾಜ್, ಸತೀಶ್ ಕೊಳೇನಹಳ್ಳಿ, (4ನೇ ಪುಟಕ್ಕೆ)

## ಇಂಗ್ಲಿಷ್ ಟಿಪ್ಪಣಿ ನಿಲ್ಲಿಸಲು ಸಿದ್ದರಾಮಯ್ಯ ಸೂಚನೆ



ಬೆಂಗಳೂರು, ಅ.17- ಆಡಳಿತದಲ್ಲಿ ಕನ್ನಡಕ್ಕೆ ಆದ್ಯತೆ ನೀಡಬೇಕು ಎಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರು ಮತ್ತು ಅಧಿಕಾರಿಗಳು ಕಡತಗಳಲ್ಲಿ ಇಂಗ್ಲಿಷ್ ಟಿಪ್ಪಣಿ ಮಾಡುವುದನ್ನು ನಿಲ್ಲಿಸಿ ಎಂದು ಸೂಚಿಸಿದ್ದಾರೆ.

ಕೇಂದ್ರ ಮತ್ತು ಹೊರ ರಾಜ್ಯಗಳಿಗೆ ಪತ್ರ ವ್ಯವಹಾರ ಮಾಡು ವಾಗ ಮಾತ್ರ ಇಂಗ್ಲಿಷ್ ಟಿಪ್ಪಣಿ ಬಳಸಿ. ರಾಜ್ಯದೊಳಗಿನ ವ್ಯವಹಾರ ದಲ್ಲಿ ಕನ್ನಡಕ್ಕೇ ಆದ್ಯತೆ ನೀಡಿ ಎಂದು ಅವರು ಕಿವಿ ಮಾತು ಹೇಳಿದ್ದಾರೆ. ನಾವು ಯಾವುದೇ ಭಾಷೆಯ ವಿರೋಧಿಗಳಲ್ಲ. ಎಲ್ಲವ ನ್ನೂ ಗೌರವಿಸೋಣ. ಜೊತೆ ಜೊತೆಯಲ್ಲೇ ನಮ್ಮ ಕನ್ನಡ ಭಾಷೆಗೆ ಅಗ್ರಸ್ಥಾನ ಕಲ್ಪಿಸಬೇಕಾಗಿರುವುದು ನಮ್ಮೆಲ್ಲರ ಜವಾಬ್ದಾರಿ ಎಂದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ಕರ್ನಾಟಕ ಸಂಭ್ರಮ 50ರ ಲಾಂಛನ ಬಿಡುಗಡೆ ಮಾಡಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಕನ್ನಡವನ್ನು ಮಾತನಾಡುವಂತಹ ವಾತಾವರಣ, ಕನ್ನಡದ ಅನಿವಾರ್ಯತೆಯನ್ನು ಸೃಷ್ಟಿಸುವ ಅಗತ್ಯವಿದೆ ಎಂದು ತಿಳಿಸಿದರು.

## ಸಲಿಂಗ ಸಂಬಂಧಕ್ಕೆ ಮದುವೆ ಮಾನ್ಯತೆ ಇಲ್ಲ

**ಸಂಸತ್ತು ಕಾನೂನು ರೂಪಿಸಬೇಕು ಎಂದ ಸುಪ್ರೀಂ ಕೋರ್ಟ್**

ನವದೆಹಲಿ, ಅ. 17 – ಸಲಿಂಗ ಸಂಬಂಧಕ್ಕೆ ವಿಶೇಷ ವಿವಾಹ ಕಾಯ್ದೆ (ಎಸ್.ಎಂ.ಎ.) ಅನ್ವಯ ಮದುವೆ ಮಾನ್ಯತೆ ನೀಡಲಾಗದು ಎಂದು ಸುಪ್ರೀಂ ಕೋರ್ಟ್‌ನ ಐವರು ಸದಸ್ಯರ ಸಂವಿಧಾನಿಕ ಪೀಠ ತೀರ್ಪು ನೀಡಿದೆ.


ಈ ರೀತಿಯ ಸಂಬಂಧಗಳಿಗೆ ಮಾನ್ಯತೆ ನೀಡುವುದು ಸಂಸತ್ತಿನ ಅಧಿಕಾರ ವ್ಯಾಪ್ತಿಗೆ ಬಿಟ್ಟ ವಿಷಯ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ತಿಳಿಸಿದೆ.

ಸುಪ್ರೀಂ ಕೋರ್ಟ್ ಪೀಠ ನಾಲ್ಕು ಪ್ರತ್ಯೇಕ ತೀರ್ಪುಗಳನ್ನು ನೀಡಿದೆ. ಆದರೆ, ಸಲಿಂಗ ಸಂಬಂಧಕ್ಕೆ ಮದುವೆಯ ಮಾನ್ಯತೆ ಪಡೆಯುವುದು ಮೂಲಭೂತ ಹಕ್ಕಲ್ಲ ಎಂದು ಸರ್ವಸಮ್ಮತಿಯಿಂದ ತಿಳಿಸಲಾಗಿದೆ.

ತೃತೀಯ ಲಿಂಗಿಗಳು ಮಗುವನ್ನು ದತ್ತು ಪಡೆಯಲು ಇರುವ ಅಧಿಕಾರ ಸೇರಿದಂತೆ ಹಲವಾರು ವಿಷಯಗಳನ್ನು ನ್ಯಾಯಾಲಯ ಮುಂದೂಡಿದೆ.

ಈ ತೀರ್ಪು ನೀಡಿರುವ ಪೀಠದಲ್ಲಿ ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಎಸ್. ರವೀಂದ್ರ ಭಟ್, ಹಿಮಾ ಕೊಹ್ಲಿ ಹಾಗೂ ಪಿ. ಎಸ್. ನರಸಿಂಹ ಅವರಿದ್ದಾರೆ. ನ್ಯಾಯಾಲಯಗಳು ಕಾನೂನು ರೂಪಿಸಲಾಗದು. ನ್ಯಾಯಾಲಯಗಳು ಕೇವಲ ಕಾನೂನನ್ನು ವ್ಯಾಖ್ಯಾನಿಸಬಹುದು. ವಿಶೇಷ ವಿವಾಹ ಕಾಯ್ದೆಗೆ ಸಂಸತ್ತು ತಿದ್ದುಪಡಿ ತರಬೇಕು ಎಂದು ಮುಖ್ಯ ನ್ಯಾಯಮೂರ್ತಿ (2ನೇ ಪುಟಕ್ಕೆ)

## ಬಿಜೆಪಿ ಮೈತ್ರಿಗೆ ಇಬ್ರಾಹಿಂ ಸಹ ಒಪ್ಪಿದ್ದರು : ಹೆಚ್.ಡಿ. ದೇವೇಗೌಡ



ಬೆಂಗಳೂರು, ಅ.17 - ಬಿಜೆಪಿ ಜೊತೆಗೆ ಮೈತ್ರಿ ಮಾಡಿಕೊಳ್ಳುವ ಸಂಬಂಧ ಮಾಜಿ ಮುಖ್ಯಮಂತ್ರಿ ಹೆಚ್. ಡಿ. ಕುಮಾರಸ್ವಾಮಿ ಅವರು ನಡೆಸಿದ ಸಭೆಯಲ್ಲಿ ಹಾಜರಿದ್ದ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಅವರು ಕೂಡ ಮೈತ್ರಿಗೆ ಒಪ್ಪಿಗೆ ಸೂಚಿಸಿದ್ದಾರೆ ಎಂದು ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಹಾಗೂ ಮಾಜಿ ಸಚಿವ ಜಿ.ಟಿ. ದೇವೇಗೌಡರು ತಿಳಿಸಿದರು. ಸುದ್ದಿಗಾರರೊಂದಿಗೆ (2ನೇ ಪುಟಕ್ಕೆ)

## ಎರೇಬೂದಿಹಾಳು ಬಸಮ್ಮ ನಿಧನ



ಹರಿಹರ ತಾಲ್ಲೂಕು ಎರೇಬೂದಿಹಾಳು ಗ್ರಾಮದ ವಾಸಿ ಬೇತೂರು ದಿ. ಸಿದ್ದಲಿಂಗಪ್ಪ ಇವರ ಧರ್ಮಪತ್ನಿ

**ಶ್ರೀಮತಿ ಬಸಮ್ಮ**

ಇವರು ದಿನಾಂಕ 17.10.2023ರ ಮಂಗಳವಾರ ಸಂಜೆ 4 ಗಂಟೆಗೆ ನಿಧನರಾದರು. ಮೃತರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರರು, ಐವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.10.2023ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಸ್ವಗ್ರಾಮವಾದ ಎರೇಬೂದಿಹಾಳು ಗ್ರಾಮದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ, ಮೊ : 97403 05064

## 2035ರ ವೇಳೆಗೆ ಭಾರತೀಯ ಬಾಹ್ಯಾಕಾಶ ಕೇಂದ್ರ

ನವದೆಹಲಿ, ಅ. 17 – 2035ರ ವೇಳೆಗೆ ಭಾರತೀಯ ಬಾಹ್ಯಾಕಾಶ ಕೇಂದ್ರ ಸ್ಥಾಪನೆಯಾಗಬೇಕು ಹಾಗೂ 2040ರ ವೇಳೆಗೆ ಚಂದ್ರನ ಮೇಲೆ ಮೊದಲ ಭಾರತೀಯನನ್ನು ಕಳಿಸುವಂತಾಗಬೇಕು ಎಂದು ಇಸ್ರೋಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಮಹತ್ವಾಕಾಂಕ್ಷಿ ಗುರಿ ನೀಡಿದ್ದಾರೆ. ಗಗನಯಾನದ ಪ್ರಗತಿಯ ಬಗ್ಗೆ ಇಸ್ರೋ ಅಧ್ಯಕ್ಷ ಎಸ್. ಸೋಮನಾಥ್ ಅವರ ಜೊತೆ ಪ್ರಧಾನಿ ಮಾತುಕತೆ ನಡೆಸುವ ವೇಳೆ ಈ ಗುರಿ ನೀಡಿದ್ದಾರೆ. ಅಕ್ಟೋಬರ್ 21ರಂದು ಗಗನಯಾತ್ರೆ ಕುರಿತ ವ್ಯವಸ್ಥೆಯೊಂದರ ಪ್ರಾತ್ಯಕ್ಷಿಕೆ ನಡೆಯಲಿದೆ. 2025ರಲ್ಲಿ ಮಾನವ ಸಹಿತ ಮೊದಲ ಗಗನಯಾನ ನಡೆಸಲು ಯೋಜಿಸಲಾಗಿದೆ ಎಂದು ಪ್ರಧಾನ ಮಂತ್ರಿ ಕಚೇರಿ ಹೇಳಿಕೆಯಲ್ಲಿ ತಿಳಿಸಲಾಗಿದೆ.

## ಗಾಜಾ ಆಸ್ಪತ್ರೆಯಲ್ಲಿ ಸ್ಫೋಟ, 500 ಸಾವು

ಪ್ಯಾಲೆಸ್ತೇನ್, ಅ. 17 – ಗಾಜಾ ಪಟ್ಟಿಯಲ್ಲಿನ ಆಸ್ಪತ್ರೆಯಲ್ಲಿ ಸ್ಫೋಟ ಸಂಭವಿಸಿ ಕನಿಷ್ಠ 500 ಜನ ಸಾವನ್ನಪ್ಪಿದ್ದಾರೆ ಎಂದು ಹಮಾಸ್ ನಡೆಸುವ ಆರೋಗ್ಯ ಸಚಿವಾಲಯ ತಿಳಿಸಿದೆ. ಅಲ್ - ಅಹ್ಲಿ ಆಸ್ಪತ್ರೆಯಲ್ಲಿ ಈ ಸ್ಫೋಟ ಸಂಭವಿಸಿದೆ ಎಂದು ತಿಳಿಸಲಾಗಿದೆ. ಈ ವರದಿ ದೃಢಪಟ್ಟಲ್ಲಿ 2008ರ ನಂತರ ಇಸ್ರೇಲ್ ನಡೆಸಿದ ಅತ್ಯಂತ ಮಾರಣಾಂತಿಕ ವೈಮಾನಿಕ ದಾಳಿ ಇದಾಗಲಿದೆ.

ಈ ವರದಿ ಬಗ್ಗೆ ಪರಿಶೀಲಿಸುತ್ತಿರುವುದಾಗಿ ಇಸ್ರೇಲ್ ಸೈನ್ಯ ತಿಳಿಸಿದೆ.




## ದೊಡ್ಡಗೌಡ್ರು ಶ್ರೀ ಕೆ.ಜಿ. ಮಹೇಶ್ವರಪ್ಪ ನಿಧನ



ದಾವಣಗೆರೆ ಜಿಲ್ಲೆ, ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದ ವಾಸಿ

**ಶ್ರೀಮತಿ ಜಯಶ್ರೀ** ಇವರ ಪತಿ

**ದೊಡ್ಡಗೌಡ್ರು ಶರಣ ಕೆ.ಜಿ. ಮಹೇಶ್ವರಪ್ಪನವರು**

(75 ವರ್ಷ) ಇವರು, ದಿನಾಂಕ : 17.10.2023ರ ಮಂಗಳವಾರ ಮಧ್ಯಾಹ್ನ 2.00 ಗಂಟೆಗೆ ನಿಧನರಾಗಿರುತ್ತಾರೆ. ಪತ್ನಿ, ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಸಹೋದರರು, ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 18.10.2023ರ ಬುಧವಾರ ಮಧ್ಯಾಹ್ನ 12.00ಕ್ಕೆ ಮೃತರ ಸ್ವ-ಗ್ರಾಮ ಬಿ. ಕಲಪನಹಳ್ಳಿಯ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು :

ಪತ್ನಿ : ಶ್ರೀಮತಿ ಜಯಶ್ರೀ ಮತ್ತು ಮಕ್ಕಳು

ಕುಟುಂಬ ವರ್ಗದವರು, ದೊಡ್ಡಗೌಡ್ರು ವಂಶಸ್ಥರು, ಬಿ. ಕಲಪನಹಳ್ಳಿ.

ಫೋನ್ : 9980640747, 99023 80802

# ವಯಸ್ಸು, ಅಧಿಕಾರ, ಸಂಪತ್ತು ಶಾಶ್ವತವಲ್ಲ ಎಂದು ತಿಳಿದರೆ ಭ್ರಷ್ಟಾಚಾರ ನಿರ್ಮೂಲನೆ



## ಲೋಕಾಯುಕ್ತ ಡಿವೈಎಸ್ಪಿ ಬಿ.ಪಿ. ಚಂದ್ರಶೇಖರ್

ದಾವಣಗೆರೆ, ಅ.17- ವಯಸ್ಸು, ಅಧಿಕಾರ ಹಾಗೂ ಸಂಪತ್ತು ಶಾಶ್ವತವಲ್ಲ ಎಂದು ಪ್ರತಿಯೊಬ್ಬರೂ ತಿಳಿದರೆ ಭ್ರಷ್ಟಾಚಾರ ತಾನಾಗಿಯೇ ನಿರ್ಮೂಲನೆಯಾಗುತ್ತದೆ ಎಂದು ಲೋಕಾಯುಕ್ತ ಡಿವೈಎಸ್ಪಿ ಬಿ.ಪಿ. ಚಂದ್ರಶೇಖರ್ ಹೇಳಿದರು.

ನಗರದ ಮಾ.ಸ.ಬ ಕಲಾ ಮತ್ತು ವಾಣಿಜ್ಯ ಕಾಲೇಜಿನ ಸಮಾಜಶಾಸ್ತ್ರ ವಿಭಾಗ ಹಾಗೂ ಲೋಕಾಯುಕ್ತ ಇಲಾಖೆ ಸಂಯುಕ್ತಾಶ್ರಯದಲ್ಲಿ ಕಾಲೇಜು ಸಭಾಂಗಣದಲ್ಲಿ ಭ್ರಷ್ಟಾಚಾರ ವಿರುದ್ಧ ಜಾಗೃತಿ ಅರಿವು ಸಪ್ತಾಹ-2023 'ದೇಶದ ಅಭಿವೃದ್ಧಿಗಾಗಿ, ಭ್ರಷ್ಟಾಚಾರ ಮುಕ್ತ ಭಾರತ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯ ಹುಟ್ಟಿದಾಗಿನಿಂದಲೂ ಭ್ರಷ್ಟಾಚಾರ ಆರಂಭವಾಗಿದೆ. ವಿದ್ಯಾವಂತರಾದರೆ ಭ್ರಷ್ಟಾಚಾರ ಕಡಿಮೆಯಾಗುತ್ತದೆ ಎಂಬ ಕಲ್ಪನೆ ಹುಸಿಯಾಗಿದೆ. ಪ್ರಸ್ತುತ ದಿನಗಳಲ್ಲಿ ಪಡೆದ ವಿದ್ಯೆಯನ್ನು ಉಪಯೋಗಿಸಿಕೊಂಡೇ ಭ್ರಷ್ಟಾಚಾರ ಮಾಡುವುದು ಹೆಚ್ಚಾಗಿದೆ. ಇದಕ್ಕೆ ಉದಾಹರಣೆ ಇತ್ತೀಚಿನ ಸೈಬರ್ ಕ್ರೈಂ ಅಪರಾಧಗಳಾಗಿವೆ ಎಂದರು.

ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ವಿದ್ಯಾರ್ಥಿಗಳ ಪಾತ್ರ ಮಹತ್ವದ್ದಾಗಿದೆ. ಈ ಹಿನ್ನೆಲೆಯಲ್ಲಿ ಕಾಲೇಜುಗಳಲ್ಲಿ ಇಂತಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಕೇವಲ ಜ್ಞಾನ ಪಡೆದರೆ ಸಾಲದು, ಸಂಸ್ಕೃತಿ, ಸಂಸ್ಕಾರ ಕಲಿಯಬೇಕು. ಆಗ ವ್ಯಕ್ತಿ ಜೂಜು, ಅಪರಾಧ, ಭ್ರಷ್ಟಾಚಾರದಿಂದ ದೂರ ಇರಲು ಸಾಧ್ಯ ಎಂದು ಪ್ರತಿಪಾದಿಸಿದರು.

ಮನುಷ್ಯ ಹೇಗಿರಬೇಕು ಎಂಬುದನ್ನು ಹನ್ನೆರಡನೇ ಶತಮಾನದಲ್ಲಿಯೇ ಬಸವಣ್ಣವರು ತಿಳಿಸಿಕೊಟ್ಟಿದ್ದರು. ಅವರ ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ಎಂಬ ವಚನದಲ್ಲಿ ಭಾರತೀಯ ದಂಡ ಸಂಹಿತೆಯಲ್ಲಿನ ಎಲ್ಲಾ ವಿಷಯಗಳಿವೆ. ಇದೊಂದು ವಚನವನ್ನು ಎಲ್ಲರೂ ಪಾಲನೆ ಮಾಡಿದಲ್ಲಿ ದೇಶ ಅಭಿವೃದ್ಧಿಯತ್ತ ಸಾಗುತ್ತದೆ ಎಂದು ಹೇಳಿದರು.

ಎಲ್ಲಿಯೇ ಭ್ರಷ್ಟಾಚಾರ ನಡೆದರೂ ದಾಳಿ ಮಾಡುವ ಅಧಿಕಾರ ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ಇದೆ. ಭ್ರೂಣ ಹತ್ಯೆ, ಲಂಚ ಸ್ವೀಕಾರ ಸೇರಿದಂತೆ ಯಾವುದೇ ಪ್ರಕರಣಗಳು ಇದ್ದಲ್ಲಿ ನೇರವಾಗಿ ಲೋಕಾಯುಕ್ತ ಸಂಸ್ಥೆಗೆ ತಿಳಿಸಬೇಕು. ನಿಮ್ಮ ಹೆಸರನ್ನು ಗೌಪ್ಯವಾಗಿಟ್ಟು ಭ್ರಷ್ಟರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ರಾಘವೇಂದ್ರ ಆರ್. ಅತಿಥಿಗಳನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಪ್ರಪಂಚದ ಎಲ್ಲಾ ರಾಷ್ಟ್ರಗಳು ಭ್ರಷ್ಟಾಚಾರ ಸಮಸ್ಯೆ ಎದುರಿಸುತ್ತಿವೆ. 180 ರಾಷ್ಟ್ರಗಳ ಪೈಕಿ ಭಾರತ ಭ್ರಷ್ಟಾಚಾರದಲ್ಲಿ 85ನೇ ಸ್ಥಾನ ಪಡೆದಿದೆ ಎಂದರು.

ಭ್ರಷ್ಟಾಚಾರದಿಂದಾಗಿ ದೇಶದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗಳ ಮೇಲೆ ಪರಿಣಾಮ ಬೀರುತ್ತದೆ. ಭ್ರಷ್ಟಾಚಾರ ನಿರ್ಮೂಲನೆಯಾಗದ ಹೊರತು ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಲು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು. ಮಾ.ಸ.ಬ. ಕಾಲೇಜು ಪ್ರಾಂಶುಪಾಲರಾದ ಪ್ರೊ.ನೀಲಾಂಬಿಕ ಜಿ.ಸಿ. ಅಧ್ಯಕ್ಷತೆ ವಹಿಸಿದ್ದರು. ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ಪ್ರಭು ಬಿ.ಸೂರಿನ ಉಪಸ್ಥಿತರಿದ್ದರು.

ವಿದ್ಯಾರ್ಥಿನಿ ಅಂಕಿತ ಪ್ರಾರ್ಥಿಸಿದರರು. ಕನ್ನಡ ವಿಭಾಗದ ಮುಖ್ಯಸ್ಥ ಡಾ.ಮಂಜಪ್ಪ ಎಂ. ನಿರೂಪಿಸಿದರು. ಉಪನ್ಯಾಸಕಿ ಡಾ.ಕಾವ್ಯಶ್ರೀ ವಂದಿಸಿದರು.

# ಮೈತ್ರಿಗೆ ಒಪ್ಪಿದ್ದರು

(1ನೇ ಪುಟದಿಂದ) ಮಾತನಾಡಿದ ಅವರು ಅರಮನೆ ಮೈದಾನದಲ್ಲಿ ನಡೆದ ಪಕ್ಷದ ಸಭೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು ತೆಗೆದುಕೊಳ್ಳುವ ತೀರ್ಮಾನಕ್ಕೆ ಬೆಂಬಲ ಘೋಷಿಸಿದ್ದರು. ಅಲ್ಲದೆ, ಸೀಟು ಹಂಚಿಕೆ ವಿಚಾರದಲ್ಲಿ ಸರಿಯಾದ ತೀರ್ಮಾನ ಕೈಗೊಳ್ಳುವಂತೆ ಸಲಹೆ ಕೂಡ ಕೊಟ್ಟಿದ್ದರು. ಪಕ್ಷದಲ್ಲಿ ಯಾವುದೇ ರೀತಿಯ ಬಂಡಾಯ ಇಲ್ಲ. ಪಕ್ಷ ಎರಡು ಭಾಗವೂ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ವಿಧಾನಸಭೆ ಚುನಾವಣೆಯಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲಿಲ್ಲವೆಂದು ಇಬ್ರಾಹಿಂ ರಾಜ್ಯಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಆಗ ದೇವೇಗೌಡರು ರಾಜೀನಾಮೆ ಬೇಡ ಪಕ್ಷ ಕಟ್ಟೋಣ ಎಂಬ ಕಿವಿಮಾತು ಹೇಳಿದ್ದರು ಎಂದರು. ಅಭಿಮಾನಿಗಳ ಒತ್ತಡಕ್ಕೆ ಮಣಿದು ಇಬ್ರಾಹಿಂ ಸಭೆ ನಡೆಸಿದ್ದಾರೆ. ದೆಹಲಿಗೆ ಕುಮಾರಸ್ವಾಮಿ ಕರೆದಿಲ್ಲ ಎಂಬ ಕಾರಣಕ್ಕೆ ಇಬ್ರಾಹಿಂ ಬೇಸರಗೊಂಡಿದ್ದಾರೆ ಎಂದರು.

# ಸಲಿಂಗ ಸಂಬಂಧಕ್ಕೆ ಮದುವೆ ಮಾನ್ಯತೆ ಇಲ್ಲ

(1ನೇ ಪುಟದಿಂದ) ಚಂದ್ರಚೂಡ್ ಹೇಳಿದ್ದಾರೆ.

ತೃತೀಯ ಲಿಂಗದ ವಿಶಿಷ್ಟತೆಯು ಕೇವಲ ನಗರ ಕೇಂದ್ರಗಳಿಗೆ ಅಥವಾ ನಿರ್ದಿಷ್ಟ ವಯೋಮಾನಕ್ಕೆ ಅಥವಾ ಉನ್ನತ ವರ್ಗದವರಿಗೆ ಸೀಮಿತವಾಗಿಲ್ಲ. ಈ ವರ್ಗದವರು ಪಕ್ಷಪಾತ ಎದುರಿಸದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮ ತೆಗೆದುಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಮಕ್ಕಳು ಲಿಂಗ ಬದಲಾವಣೆ ಕುರಿತ ಎಲ್ಲ ವಿಷಯಗಳು ಸಮಗ್ರವಾಗಿ ತಿಳಿಯುವವರೆಗೂ ಅವರನ್ನು ಲಿಂಗ ಬದಲಾವಣೆ ಶಸ್ತ್ರಚಿಕಿತ್ಸೆಗೆ ಒಳಪಡಿಸಬಾರದು ಎಂದೂ ಸುಪ್ರೀಂ ಕೋರ್ಟ್ ತೀರ್ಪಿನಲ್ಲಿ ಹೇಳಲಾಗಿದೆ.

# ಸಮುದಾಯ ಆರೋಗ್ಯ ಕೇಂದ್ರಕ್ಕೆ ಶಾಸಕ ಬಿ.ಪಿ. ಹರೀಶ್ ಭೇಟಿ



## ಮಲೇಬೆನ್ನೂರು

ಮಲೇಬೆನ್ನೂರು, ಅ. 17- ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಸೋಮವಾರ ಶಾಸಕ ಬಿ.ಪಿ. ಹರೀಶ್ ದಿಢೀರ್ ಭೇಟಿ ನೀಡಿ ಕುಂದು-ಕೊರತೆ ಪರಿಶೀಲಿಸಿದರು. ಜ್ವರ ಬಾಧೆಗೆ ಒಳಗಾಗಿರುವ ರೋಗಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಜ್ವರ ಪೀಡಿತರು ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗುತ್ತಿದ್ದಾರೆ. ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ. ಔಷಧಿ ಕೊರತೆ ಇಲ್ಲ ಎಂದು ಕರ್ತವ್ಯ ವೈದ್ಯಾಧಿಕಾರಿ ಡಾ.ಲಕ್ಷ್ಮೀದೇವಿ ಮಾಹಿತಿ ನೀಡಿದರು. ಹೆಚ್ಚಿನ ಸಂಖ್ಯೆಯಲ್ಲಿ ಹೆರಿಗೆ ಮಾಡಿಸಲಾಗುತ್ತಿದೆ. ಸಿಜೇರಿಯನ್ ಹೆರಿಗೆ ಅವಶ್ಯಕತೆ ಇರುವವರಿಗೆ ಹರಿಹರ ಅಥವಾ ದಾವಣಗೆರೆಗೆ ಕಳುಹಿಸಲಾಗುತ್ತಿದೆ.

ತುರ್ತು ಚಿಕಿತ್ಸಾ ಘಟಕಕ್ಕೆ ಕೊಠಡಿಯ ಅಗತ್ಯವಿದೆ. ಈಗ 30 ಬೆಡ್ ವ್ಯವಸ್ಥೆ ಇದ್ದು, 70 ಬೆಡ್ ಆಸ್ಪತ್ರೆಯಾಗಿ ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆ ನನೆಗುದಿಗೆ ಬಿದ್ದಿದೆ. ಚುಚ್ಚುಮದ್ದು ಕೊಠಡಿ ಅವಶ್ಯಕತೆ ಇದೆ. ಔಷಧಿ ವಿತರಕ, ಮಕ್ಕಳು ಹಾಗೂ ಪ್ರಸೂತಿ ವೈದ್ಯರ ಹುದ್ದೆ ಖಾಲಿ ಇದೆ ಎಂದು ಡಾ. ಲಕ್ಷ್ಮೀದೇವಿ ಶಾಸಕರಿಗೆ ತಿಳಿಸಿದರು.

ಆಸ್ಪತ್ರೆಯ ಶೌಚಾಲಯ, ಶವಾಗಾರಕ್ಕೆ ಭೇಟಿ ನೀಡಿದರು. ನಿವೇಶನ ನೀಡಿದರೆ ಪುರಸಭೆಯಿಂದ ಸುಲಭ್ ಶೌಚಾಲಯ ನಿರ್ಮಿಸಿಕೊಡುತ್ತೇವೆ ಎಂದು ಸ್ಥಳದಲ್ಲಿದ್ದ ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಮಾಹಿತಿ ನೀಡಿದರು. ಅ. 21 ರಂದು ಆರೋಗ್ಯ ರಕ್ಷಾ ಸಮಿತಿ ಸಭೆ ಕರೆಯುವಂತೆ ಶಾಸಕರು ಸೂಚಿಸಿದರು.

ಪರಿಸರ ಎಂಜಿನಿಯರ್ ಉಮೇಶ್, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬಿ. ಮಂಜುನಾಥ್, ಭಾನುವಳ್ಳಿ ಸುರೇಶ್, ಮಾಜಿ ಸದಸ್ಯರಾದ ಪಿ. ಆರ್. ರಾಜು, ಎ.ಕೆ. ಲೋಕೇಶ್, ಪಾಳೇಗಾರ್ ನಾಗರಾಜ್, ಭೋವಿ ಮಂಜಣ್ಣ, ನ್ಯಾಯಬೆಲೆ ಅಂಗಡಿ ಮಂಜಣ್ಣ ಮತ್ತಿತರರು ಈ ವೇಳೆ ಹಾಜರಿದ್ದರು.

**ನಿರ್ಧಾರ ಆಗಿಲ್ಲ :** ಭದ್ರಾ ಕಾಲುವೆಗೆ ನೀರು ಹರಿಸುವ ವಿಚಾರ ನಿರ್ಧಾರ ಆಗಿದೆಯಾ? ಎಂದು ರೈತರು ಶಾಸಕರಿಗೆ ಪ್ರಶ್ನಿಸಿದರು. ಈವರೆಗೂ ನೀರಾವರಿ ಸಚಿವ ಡಿ.ಕೆ. ಶಿವಕುಮಾರ್, ಭದ್ರಾ ಕಾಡಾ ಅಧ್ಯಕ್ಷರೂ ಆದ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರಿಂದ ನಿರ್ಧಾರ ಹೊರಬಿದ್ದಿಲ್ಲ. ಅಚ್ಚುಕಟ್ಟು ವ್ಯಾಪ್ತಿಯ ಭತ್ತ ಬೆಳೆದ ರೈತರು ಆತಂಕದಲ್ಲಿದ್ದಾರೆ. ನಿರ್ಧಾರಕ್ಕೆ ಕಾದು ನೋಡೋಣ ಎಂದು ಹರೀಶ್ ಹೇಳಿದರು.

# ಪುಟ್ಟರಾಜ ಸೇವಾ ಸಮಿತಿಯಿಂದ ಪಂ. ಪುಟ್ಟರಾಜ ಗವಾಯಿ ಸ್ಮರಣೋತ್ಸವ



ದಾವಣಗೆರೆ, ಅ. 17 - ಶ್ರೀ ಪಂಡಿತ ಪುಟ್ಟರಾಜ ಗವಾಯಿಗಳವರ ಸ್ಮರಣೋತ್ಸವ ಕಾರ್ಯಕ್ರಮವನ್ನು ಪುಟ್ಟರಾಜ ಸೇವಾ ಸಮಿತಿ ಜಿಲ್ಲಾ ಮಹಿಳಾ ಘಟಕ ದಾವಣಗೆರೆ ಮತ್ತು ಜಿಲ್ಲಾ ಘಟಕದವರಿಂದ ಆಚರಿಸಲಾಯಿತು.


ಶ್ರೀ ಪಂಡಿತ ಪುಟ್ಟರಾಜ ಗವಾಯಿಗಳವರ ಸ್ಮರಣೆ ಮಾಡುತ್ತಾ ಗವಾಯಿಗಳವರ ವಚನಗಳನ್ನು ಶ್ರೀಮತಿ ಮಂಗಳಗೌರಿ ಅವರು ಸದಸ್ಯರೆಲ್ಲರಿಗೂ ಹೇಳಿಕೊಟ್ಟರು ಮತ್ತು ಅವರ ಜೀವನ ಚರಿತ್ರೆಯ ಬಗ್ಗೆ ರೇವಣಸಿದ್ದಪ್ಪ ಜಿಲ್ಲಾ ಘಟಕದ ಉಪಾಧ್ಯಕ್ಷರು ತಿಳಿಸಿಕೊಟ್ಟರು. ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷ ಶ್ರೀಮತಿ ಸೌಮ್ಯ ಸತೀಶ್, ಸಹ ಕಾರ್ಯದರ್ಶಿ ಮಧುಮತಿ ಗಿರೀಶ್, ಕೋಶಾಧ್ಯಕ್ಷೆ ಶಾನ್ವಿ ರಾಜಶ್ರೀ ರಮೇಶ್, ಸಂಚಾಲಕರಾದ ಶಾಂತ ಶಿವಶಂಕರ್ ಮತ್ತು ಶಶಿಕಲಾ, ಸದಸ್ಯರಾದ ಶ್ರೀಮತಿ ಪೂರ್ಣಿಮಾ ಎಲ್. ಬಸವರಾಜ್, ಸುಮಾ, ಸೀಮಾ, ಸುಮಾ ಕಾರ್ಯಕ್ರಮದಲ್ಲಿದ್ದರು.

# ಜಗಳೂರು ಚಿತ್ರದುರ್ಗ ಜಿಲ್ಲೆಗೆ ಮರುಸೇರ್ಪಡೆಗೆ ಒತ್ತಾಯಿಸಿ ಪ್ರತಿಭಟನೆ

ಜಗಳೂರು, ಅ.17- ಜಗಳೂರು ತಾಲ್ಲೂಕನ್ನು ಚಿತ್ರದುರ್ಗ ಜಿಲ್ಲೆಗೆ ಮರುಸೇರ್ಪಡೆ ಮಾಡಬೇಕು ಎಂದು ಒತ್ತಾಯಿಸಿ, ಜಗಳೂರು ತಾಲ್ಲೂಕು ಮರುಸೇರ್ಪಡೆ ಹೋರಾಟ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿ ಮತನಾಡಿದ ತಾಲ್ಲೂಕು ಅಧ್ಯಕ್ಷ ಬಿ. ತಿಮ್ಮಾರೆಡ್ಡಿ ಈ ಹಿಂದೆ ಚಿತ್ರದುರ್ಗ ಜಿಲ್ಲೆಯಲ್ಲಿದ್ದ ಜಗಳೂರು ತಾಲ್ಲೂಕನ್ನು ಹೊಸದಾಗಿ ರಚನೆಯಾದ ದಾವಣಗೆರೆ ಜಿಲ್ಲೆಗೆ (1997-98) ಸೇರ್ಪಡೆ ಮಾಡಿಕೊಳ್ಳುವಾಗ ಜನಾಭಿಪ್ರಾಯವನ್ನು ಪಡೆಯದೇ, ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಳ್ಳಲಾಗಿದೆ. ಸಾಮಾಜಿಕ, ಭೌಗೋಳಿಕ, ಔದ್ಯೋಗಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸಂರಚನೆಗಳನ್ನು ಅಧ್ಯಯನ ಮಾಡದೇ ಹಾಗೂ ಅರ್ಥ ಮಾಡಿಕೊಳ್ಳದೇ ನಮ್ಮ ತಾಲ್ಲೂಕನ್ನು ಸೇರಿಸಿಕೊಳ್ಳಲಾಗಿದೆ. ಇದರಲ್ಲಿ ಯಾವ ಮಾನದಂಡವೂ ಬಳಕೆಯಾಗಿಲ್ಲ ಎಂದು ಆರೋಪಿಸಿದರು.

ತಾಲ್ಲೂಕಿನ ಜನತೆಯ ಅಭಿಪ್ರಾಯಗಳಿಗೂ ಮನ್ನಣೆ ಕೊಡದಂತೆ ಅಂದು ತುರ್ತಾಗಿ ಹೊಸ ದಾವಣಗೆರೆ ಜಿಲ್ಲೆಗೆ ಸೇರ್ಪಡೆಯಾದ ಜಗಳೂರು ತಾಲ್ಲೂಕು ಕಳೆದ ಇಪ್ಪತ್ತು ವರ್ಷಗಳ ಸುದೀರ್ಘ ಅವಧಿಯಲ್ಲಿ ಪಡೆದುಕೊಂಡಿದ್ದಕ್ಕಿಂತ



ಕಳೆದುಕೊಂಡಿದ್ದೇ ಹೆಚ್ಚು ! ಸತತ ಬರಗಾಲ, ಬಡತನ, ಕುಡಿಯುವ ನೀರಿಗೂ ತತ್ವಾರ, ಹಳ್ಳಿ-ಹಳ್ಳಿಗಳಲ್ಲಿ ಹೆಪ್ಪುಗಟ್ಟಿರುವ ಫ್ಲೋರೈಡ್ ನೀರು. ಈ ನೀರನ್ನು ಕುಡಿದ ಜನತೆ ನಿರಂತರವಾಗಿ ಕಾಡುವ ಅಪೌಷ್ಟಿಕತೆ ಮತ್ತು ಅನಾರೋಗ್ಯದಿಂದ ತಾಲ್ಲೂಕು ತತ್ತರಿಸಿ ಹೋಗಿದೆ ಎಂದರು.

ಉಪಾಧ್ಯಕ್ಷ ಪುಟ್ಟಣ್ಣ ಮಾತನಾಡಿ ದಾವಣಗೆರೆ, ಹರಿಹರ, ಹೊನ್ನಾಳಿ, ಚನ್ನಗಿರಿ ತಾಲ್ಲೂಕುಗಳು ನೀರಾವರಿ ಪ್ರದೇಶಗಳಾಗಿದ್ದು, ಇಲ್ಲಿಯ ರೈತರು ಅಡಿಕೆ, ತೆಂಗು, ಭತ್ತದಂತಹ ವಾಣಿಜ್ಯ ಬೆಳೆಗಳ ವಾರಸುದಾರರು. ಹಾಗೆಯೇ ವ್ಯವಹಾರಸ್ಥರು ಕೂಡ. ಇಂತಹ ಶ್ರೀಮಂತಿಕೆಯ ಫಲವತ್ತಾದ ಜನರ ಜೊತೆಗೆ ಜಗಳೂರಿನವರಾದ ನಾವುಗಳು ಹೋಲಿಕೆಗೂ ನಿಲುಕುವುದಿಲ್ಲ. ಎಲ್ಲಾ ರೀತಿಯಿಂದಲೂ ದಾವಣಗೆರೆಯೊಂದಿಗೆ ನಮ್ಮದು ಅಜ-ಗಜಾಂತರ ವ್ಯತ್ಯಾಸ. ಹೀಗಾಗಿ ನಮ್ಮನ್ನು ದಾವಣಗೆರೆ ಜಿಲ್ಲೆಯಿಂದ ಕೈ ಬಿಟ್ಟು ಪುನಃ ಚಿತ್ರದುರ್ಗ ಜಿಲ್ಲೆಗೆ ಸೇರ್ಪಡೆ ಮಾಡಿ ಎಂದು ಮನವಿ ಮಾಡಿಕೊಳ್ಳಲು ನಮಗೆ ಹತ್ತಾರು ಕಾರಣಗಳಿವೆ ಎಂದರು.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ, ಹಿರಿಯೂರು, ಮೊಳಕಾಲ್ಮೂರು, ಹೊಸದುರ್ಗ, ಹೊಳಲ್ಕೆರೆಯ ಜನಜೀವನಕ್ಕೂ, ಬದುಕು-ಬವಣೆಗಳಿಗೂ, ಸಮಸ್ಯೆ-ಸವಾಲುಗಳಿಗೂ ಜಗಳೂರು ಹೋಲಿಕೆ ಇದೆ. ನಮ್ಮ ಒಡಲ ಸಂಕಟ- ಅವರ ಒಡಲ ಸಂಕಟ ಎರಡೂ ಒಂದೇ! ಸಾಮಾಜಿಕ ಶೈಕ್ಷಣಿಕ, ಭೌಗೋಳಿಕ ಸಾಂಸ್ಕೃತಿಕ, ಚಹರೆಗಳು ಭಿನ್ನವಾಗಿಲ್ಲ. ದಾವಣಗೆರೆ ಜಿಲ್ಲೆಯೆಂಬ ಶ್ರೀಮಂತರ ಚೌಕಟ್ಟಿನಲ್ಲಿ ನಮ್ಮ ದುಃಖಕ್ಕೆ ಸಾಂತ್ವನ ಹೇಳುವವರು ಇಲ್ಲ ಎಂದರು.

ಈ ಸಂದರ್ಭದಲ್ಲಿ ಗೌರವಾಧ್ಯಕ್ಷ ಎನ್. ರಾಜಣ್ಣ, ಡಿ.ಆರ್.ಹನುಮಂತಪ್ಪ, ತಿಪ್ಪೇಸ್ವಾಮಿ, ದಾಸಪ್ಪ, ಶಂಭುಲಿಂಗಪ್ಪ, ಹಟ್ಟಿ ತಿಪ್ಪೇಸ್ವಾಮಿ, ಓಬಯ್ಯ, ಕಾಟಪ್ಪ, ಬಂಗಾರಪ್ಪ, ಸಣ್ಣ ಓಬಯ್ಯ, ಪ್ರಕಾಶ ರೆಡ್ಡಿ, ಸಣ್ಣಸೂರಯ್ಯ, ನಾಗಲಿಂಗಪ್ಪ, ನರಸಿಂಹ, ಡಿಎಸ್‌ಎಸ್ ತಾಲ್ಲೂಕು ಸಂಚಾಲಕ ಸತೀಶ್ ಸೇರಿದಂತೆ ಮತ್ತಿತರರು ಹಾಜರಿದ್ದರು.

# ಶ್ರೀ ಗಡಿ ಚೌಡೇಶ್ವರಿ ದೇವಸ್ಥಾನದಲ್ಲಿ ಲಲಿತ ಸಹಸ್ರನಾಮ



ದಾವಣಗೆರೆ, ಅ. 17 - ದಸರಾ 2ನೇ ದಿನದ ಪ್ರಯುಕ್ತ ಸಾಯಿ ಭಜನಾಮೃತ ಸದಸ್ಯರಿಂದ ಲಲಿತ ಸಹಸ್ರನಾಮ, ದೇವಿ ಭಜನೆ ಕಾರ್ಯಕ್ರಮವನ್ನು ಕುಂದುವಾಡ ರಸ್ತೆ ಶ್ರೀ ಗಡಿ ಚೌಡೇಶ್ವರಿ ದೇವಸ್ಥಾನದಲ್ಲಿ ನಡೆಸಲಾಯಿತು.

# ಹರಿಹರ : ವಾಲ್ಮೀಕಿ ಸಮಾಜದ ನೂತನ ಪದಾಧಿಕಾರಿಗಳ ಆಯ್ಕೆ



ಹರಿಹರ, ಅ.17 - ನಗರದ ವಾಲ್ಮೀಕಿ ಸಮಾಜದ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆಯನ್ನು ಹಳ್ಳದಕೇರಿ ನಾಯಕ ಸಮಾಜದ ಕಛೇರಿಯಲ್ಲಿ ನಡೆಸಲಾಯಿತು ಎಂದು ನಾಯಕ ಸಮಾಜದ ನಿಕಟಪೂರ್ವ ಅಧ್ಯಕ್ಷ ಕೆ.ಬಿ. ಮಂಜುನಾಥ್ ತಿಳಿಸಿದರು.

ನಗರದ ನಾಯಕ ಸಮಾಜದ ನೂತನ ಪದಾಧಿಕಾರಿಗಳಾಗಿ ಆಯ್ಕೆಯಾಗಿದ್ದು, ಗೌರವ ಸಲಹೆಗಾರರಾಗಿ ಗುತ್ತಿಗೆದಾರ ಕೆ.ಬಿ. ಮಂಜುನಾಥ್, ನಗರಸಭೆ ಸದಸ್ಯ ಆರ್. ದಿನೇಶ್ ಬಾಬು, ದೇವೇಂದ್ರಪ್ಪ, ಪಾಲಾಕ್ಷಪ್ಪ, ಎಂ. ಮಹಾಂತೇಶ್, ಗೌರವಾಧ್ಯಕ್ಷರಾಗಿ ಆರ್. ರಾಜು, ಅಧ್ಯಕ್ಷರಾಗಿ ಎಮ್.ಹೆಚ್. ಬಸವರಾಜ್ ಮೆಣಸಿನಾಳ, ಗೌರವ ಉಪಾಧ್ಯಕ್ಷರಾಗಿ ಹಂಚಿನಮನೆ ರೇವಣಪ್ಪ, ಉಪಾಧ್ಯಕ್ಷರಾಗಿ ಗಂಗಾಧರ್ ಮೆಣಸಿನಾಳ, ಕಾರ್ಯದರ್ಶಿಯಾಗಿ ಆರ್. ಧನರಾಜ್, ಸಹ ಕಾರ್ಯದರ್ಶಿಯಾಗಿ ರಾಜು ಬಾವಿಕಟ್ಟೆ, ಖಜಾಂಚಿಯಾಗಿ ಭರತ್ ಮುದೇನೂರು, ಸದಸ್ಯರುಗಳಾಗಿ ಅಣ್ಣಪ್ಪ ಬೆಣ್ಣಿ. ಭೀಮಣ್ಣ ದೊಗ್ಗಳ್ಳಿ. ನಿಂಗೇಶ್, ರಾಜಶೇಖರ್ ಎನ್, ಕುಮಾರ್ ಕುಂದುವಾಡ, ರೆಕ್ಕೆ ನಾಗರಾಜ್, ಸೋಮಣ್ಣ ಗಂಗಾನಗರ, ಜಿ.ಸಿ.ಬಿ ಪರಶುರಾಮ್, ಮೋಹನ್ ಕುಮಾರ್ (ಕಾಳಿದಾಸ ನಗರ), ಅಂಜನಪ್ಪ ಗುಂಡಗತ್ತಿ, (ಜೆ.ಸಿ. ಬಡಾವಣೆ) ರವಿಕುಮಾರ್, ರಮೇಶ್ ಎಂ., ಪರಶುರಾಮ್ (ಹಳೆ ಕಚೇರಿ) ಪ್ರಶಾಂತ್ (ಕೊಳಚೆ ಪ್ರದೇಶ) ರವಿರಾಜ್ ತಾವರಗಿ, ಹರೀಶ, (ದುರ್ಗ ಪೇಂಟ್), ಮಾರುತಿ (ಮಟ್ಟಿ ಬೀರಪ್ಪ ಕಣ), ರಾಜು ಬಾವಿಕಟ್ಟಿ, ವಿಶ್ವನಾಥ (ಕೇಶವ ನಗರ), ಮಾರುತಿ ಗೂಡ್‌ಶೆಡ್, ವಾಗೀಶ್ (ಹಳ್ಳದ ಕೇರಿ), ಪರಶುರಾಮ (ಬ್ಯಾಂಕ್) ರವರನ್ನು ಸರ್ವ ಸದಸ್ಯರು ಸೇರಿ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

# ಮಗುವಿನೊಂದಿಗೆ ಸೂಳೆಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಗೃಹಿಣಿ

ಚನ್ನಗಿರಿ, ಅ.17- ಮಹಿಳೆಯೊಬ್ಬರು ತನ್ನ ಐದು ವರ್ಷದ ಮಗುವನ್ನು ವೇಲ್‌ಗೆ ಕಟ್ಟಿಕೊಂಡು ಸೂಳೆಕೆರೆಗೆ ಹಾರಿ ಆತ್ಮಹತ್ಯೆಗೆ ಮಾಡಿಕೊಂಡ ಘಟನೆ ನಡೆದಿದೆ.

ತಾಲ್ಲೂಕಿನ ಹೊನ್ನೇಬಾಗಿ ಗ್ರಾಮದ ಮಂಜುನಾಥ್ ಅವರ ಪತ್ನಿ ಕವಿತಾ (27), ಪುತ್ರಿ ನಿಹಾರಿಕಾ (5) ಮೃತಪಟ್ಟವರು.

ಆರು ವರ್ಷಗಳ ಹಿಂದೆ ಹೊನ್ನೇಬಾಗಿ ಗ್ರಾಮದ ಮಂಜುನಾಥ್ ಅವರೊಂದಿಗೆ ಎರೇಹಳ್ಳಿ ಗ್ರಾಮದ ಕವಿತಾ ಅವರ ವಿವಾಹವಾಗಿತ್ತು. ಕವಿತಾ ಅವರು ಮಗುವಿನೊಂದಿಗೆ ಕಾಣೆಯಾಗಿರುವ ಬಗ್ಗೆ ಚನ್ನಗಿರಿ ಠಾಣೆಗೆ ಪತಿ ಮಂಜುನಾಥ್ ದೂರು ನೀಡಿದ್ದರು. ಸಾಕಷ್ಟು ಹುಡುಕಾಟದ ಬಳಿಕ ಸೂಳೆಕೆರೆಯಲ್ಲಿ ಕವಿತಾ ಮತ್ತು ನಿಹಾರಿಕಾ ಶವಗಳು ಪತ್ತೆಯಾಗಿದ್ದವು.

ವರದಕ್ಷಿಣೆ ಕಿರುಕುಳದಿಂದ ತಮ್ಮ ಮಗಳು ಮಗುವಿನೊಂದಿಗೆ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಮಂಜುನಾಥ್‌ನನ್ನು ಬಂಧಿಸಿ ಸೂಕ್ತ ಕ್ರಮ ಜರುಗಿಸಬೇಕು ಎಂದು ಕವಿತಾ ತವರು ಮನೆಯವರು ದೂರಿನಲ್ಲಿ ತಿಳಿಸಿದ್ದಾರೆ. ಎಸ್‌ಪಿ ಉಮಾ ಪ್ರಶಾಂತ್ ಹಾಗೂ ಡಿವೈಎಸ್‌ಪಿ ಪ್ರಶಾಂತ್ ಮನ್ನೊಳಿ ಅವರು ಭಾನುವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.


॥ ಶ್ರೀ ಶಿವನಾರದ ಮುನಿ ಪ್ರಸನ್ನ ॥



## ಕೈಲಾಸ ಶಿವಗಣಾರಾಧನೆ



ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು ಮುಷ್ಠಿಗರಹಳ್ಳಿ ಗ್ರಾಮದ ವಾಸಿ

ಶ್ರೀ ಗೌಡ್ರ ಬಿ.ದಾನಪ್ಪ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು.



ಶ್ರೀಮತಿ ಮಹಾದೇವಮ್ಮನವರು (ಅಕ್ಕಮ್ಮ)
ನಿಧನ : 11.10.2023

ದಿನಾಂಕ 11.10.2023ನೇ ಬುಧವಾರ ಬೆಳಗಿನ ಜಾವ 3.35ಕ್ಕೆ ನನ್ನ ಧರ್ಮಪತ್ನಿಯವರಾದ

**ಶ್ರೀಮತಿ ಮಹಾದೇವಮ್ಮನವರು (ಅಕ್ಕಮ್ಮ)**

ಶಿವಾಧೀನರಾದ ಪ್ರಯುಕ್ತ ಇವರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ 19.10.2023ನೇ ಗುರುವಾರ ಬೆಳಿಗ್ಗೆ 10.30 ಗಂಟೆಗೆ ಮೃತರ ಸ್ವಗೃಹ, 3682 / ಎ-65, ತರಳಬಾಳು ಬಡಾವಣೆ, ವಾಣಿ ರೈಸ್ ಮಿಲ್ ರೋಡ್, ದಾವಣಗೆರೆ ಇಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.


ದುಃಖತಪ್ತರು

ಶ್ರೀ ಗೌಡ್ರ ಬಿ. ದಾನಪ್ಪ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ದಿ|| ಶ್ರೀ ಹಾಲಪ್ಪನವರ ಧರ್ಮಪತ್ನಿ ಶ್ರೀಮತಿ ಬಸಮ್ಮ ಹಾಗೂ ಕಡಬಗೆರೆ ವಂಶಸ್ಥರು, ಮೀನಿಗರಹಳ್ಳಿ ಹಾಗೂ ಗೌಡ್ರು ವಂಶಸ್ಥರು, ಮುಷ್ಟಿಗರಹಳ್ಳಿ ಮತ್ತು ಬಂಧು-ಮಿತ್ರರು.

ಮೊ : 98444 90062, 79962 82866



## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 17.10.2023ರ ಮಂಗಳವಾರ ನಿಧನರಾದ

**ಭಾನುವಳ್ಳಿ ಸಣ್ಣಗೌಡ್ರ ಶ್ರೀ ಬಸವನಗೌಡ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

✦ ಬಿ.ಕೆ. ಗಣೇಶ್ ಹಳೇಬಿಸಲೇರಿ
ಶ್ರೀ ಅನ್ನಪೂರ್ಣೇಶ್ವರಿ ಊಟ ಮತ್ತು ಉಪಹಾರ ಮಂದಿರ
# 4235/05, 8ನೇ ಕ್ರಾಸ್, ಕುವೆಂಪು ನಗರ
(ಹಳೇ ಆರ್‌ಟಿಓ ಸರ್ಕಲ್ ಹತ್ತಿರ) ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
✦ ರಾಜು ಪಾಟೀಲ್, ವಕೀಲರು, ಭಾನುವಳ್ಳಿ.
✦ ರುದ್ರೇಶ್ ಬಿ.ಕೆ. ಹಳೇಬಿಸಲೇರಿ


## ಭಾನುವಳ್ಳಿ ಗ್ರಾಮದ ಬಸವನಗೌಡ ನಿಧನ



ಹರಿಹರ ತಾಲ್ಲೂಕು ಭಾನುವಳ್ಳಿ ಗ್ರಾಮದ ವಾಸಿ, **ಸಣ್ಣಗೌಡ್ರ ಶ್ರೀ ಬಸವನಗೌಡ** (73) ಅವರು ದಿನಾಂಕ 17-10-2023ರ ಮಂಗಳವಾರ ಮಧ್ಯಾಹ್ನ 3.30 ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 18-10-2023ರ ಬುಧವಾರ ಮಧ್ಯಾಹ್ನ 12 ಗಂಟೆಗೆ ಭಾನುವಳ್ಳಿ ಗ್ರಾಮದಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ, ಮೊ. : 95384 71671

## ಟಿ. ಶಿವನಾಗಪ್ಪ ನಿಧನ



ದಾವಣಗೆರೆ ಕೆಟಿಜೆ ನಗರ 15ನೇ ಕ್ರಾಸ್ ವಾಸಿ ಟಿ. ಶಿವನಾಗಪ್ಪ (82) ಅವರು ದಿನಾಂಕ 17.10. 2023ರ ಮಂಗಳವಾರ ರಾತ್ರಿ 10.30ಕ್ಕೆ ನಿಧನರಾದರು. ಪತ್ನಿ, ಮೂವರು ಪುತ್ರಿಯರು, ಇಬ್ಬರು ಪುತ್ರರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.10.2023ರ ಬುಧವಾರ ಮಧ್ಯಾಹ್ನ 12.30ಕ್ಕೆ ಗಾಂಧಿನಗರದ ಬೂದಾಳ್ ರಸ್ತೆಯ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ನೇತ್ರ ದಾನ ಶ್ರೇಷ್ಠ ದಾನ**

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ವಿವಿಧೆಡೆಗಳಲ್ಲಿ ನವರಾತ್ರಿ ಮೂರನೇ ದಿನದ ವಿಶೇಷಾಲಂಕಾರಗಳಲ್ಲಿ ಶಕ್ತಿದೇವಿಯರು


ನಗರದೇವತೆ ಶ್ರೀ ದುರ್ಗಾಂಬಿಕಾ ದೇವಿಗೆ ವೃಷಭ ಅಲಂಕಾರ


ಕಾಳಿಕಾದೇವಿ ರಸ್ತೆಯ ಶ್ರೀ ಕಾಳಿಕಾದೇವಿಗೆ ಬನಶಂಕರಿ ದೇವಿ ಅಲಂಕಾರ


ದಾವಲ್ ಪೇಟೆ ಚೌಡೇಶ್ವರಿ ದೇವಿಗೆ ಗಾಜಿನ ಬಳೆ ಅಲಂಕಾರ


ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ಕಟೀಲು ದುರ್ಗಾ ಪರಮೇಶ್ವರಿ ಅಲಂಕಾರ


ನಿಟುವಳ್ಳಿ ಶ್ರೀ ದುಗ್ಗಮ್ಮ ದೇವಸ್ಥಾನದಲ್ಲಿ ಚಂದ್ರ ಘಂಟಾ ಅಲಂಕಾರ


ಭಗತ್ ಸಿಂಗ್ ನಗರದ ಬನ್ನಿಮಹಾಂಕಾಳಿ ದೇವಸ್ಥಾನದಲ್ಲಿ ವೀಳ್ಯದ ಎಲೆ ಅಲಂಕಾರ


ಕೊಟ್ಟೂರೇಶ್ವರ ಬಡಾವಣೆ ಶ್ರೀ ಜೋಡಿ ಬನ್ನಿ ಮಹಾಂಕಾಳಿಗೆ ವಿಶೇಷ ಅಲಂಕಾರ


ಶ್ರೀ ರೇಣುಕಾ ಯಲ್ಲಮ್ಮ ದೇವಿಗೆ ಹರಿಶಿಣ ಅಲಂಕಾರ


ವಿನೋಬನಗರದ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಪುಷ್ಪಾಲಂಕಾರ


ದೇವಾಂಗಪೇಟೆ ಶ್ರೀ ಬನಶಂಕರಿ ದೇವಸ್ಥಾನದಲ್ಲಿ ಬೆಂಡೆಕಾಯಿ ಅಲಂಕಾರ


ಜಯದೇವ ಸರ್ಕಲ್‌ನ ಕೂಡಲಿ ಮಠದಲ್ಲಿ ಶ್ರೀದೇವಿಗೆ ಅಕ್ಷತೆ ಅಲಂಕಾರ


ಕೆಟಿಜೆ ನಗರದ ಶ್ರೀ ತುಳುಜಾಭವಾನಿ ದೇವಸ್ಥಾನದಲ್ಲಿ ಅಮ್ಮನವರಿಗೆ ವಿಶೇಷಾಲಂಕಾರ


ದೇವರಾಜ ಅರಸು ಬಡಾವಣೆಯ ಶ್ರೀ ಅನ್ನಪೂರ್ಣೇಶ್ವರಿ ದೇವಿಗೆ ವಿಶೇಷಾಲಂಕಾರ


ಎಸ್‌ಓಜಿ ಕಾಲೋನಿ ಶ್ರೀ ಶನೈಶ್ಚರ ಸ್ವಾಮಿಯ ಸನ್ನಿಧಿಯಲ್ಲಿ ಶ್ರೀ ಚೌಡೇಶ್ವರಿಗೆ ವಿಶೇಷಾಲಂಕಾರ


ವಿದ್ಯಾನಗರದ ಈಶ್ವರ ಪಾರ್ವತಿ ದೇವಸ್ಥಾನರದಲ್ಲಿ ಅಮ್ಮನವರಿಗೆ ವಿಶೇಷಾಲಂಕಾರ


ಡಿಸಿಎಂ ಟೌನ್‌ಶಿಪ್ ವಾಸವಿ ದೇವಸ್ಥಾನದಲ್ಲಿ ಶ್ರೀ ಬನಶಂಕರಿ ದೇವಿ ಅಲಂಕಾರ


ಶಾಮನೂರಿನ ಶ್ರೀ ಮಂಗಳಗೌರಮ್ಮ ದೇವಸ್ಥಾನದಲ್ಲಿ ಚಂದ್ರಘಂಟದೇವಿ ಅಲಂಕಾರ


ಶಾಮನೂರಿನ ಶ್ರೀ ಮಾಲಸಾಂಬ ಗಂಗಮ್ಮ ದೇವಸ್ಥಾನದಲ್ಲಿ ನವರಾತ್ರಿ ವಿಶೇಷಾಲಂಕಾರ


ಹರಿಹರ ಹಳ್ಳದಕೇರಿ ಬಡಾವಣೆ ಶ್ರೀ ಏಕನಾಥೇಶ್ವರಿ ದೇವಿಗೆ ರೇಣುಕಾ ಎಲ್ಲಮ್ಮ ದೇವಿಯ ಅಲಂಕಾರ


ಹರಿಹರ ಹೊಸಭರಂಪುರದ ಕಸಬಾ ಗ್ರಾಮ ದೇವತೆಗೆ ಸವದತ್ತಿ ರೇಣುಕಾ ಎಲ್ಲಮ್ಮ ಅಲಂಕಾರ


ಹರಿಹರ ಕಸಬಾ ಗ್ರಾಮದೇವತೆ ಊರಮ್ಮ ದೇವಿಗೆ ಗಾಣಗಟ್ಟೆ ಮಾಯಮ್ಮದೇವಿಯ ಅಲಂಕಾರ


ಹರಿಹರ ಮಹಜೇನಹಳ್ಳಿ ಗ್ರಾಮದೇವತೆ ಊರಮ್ಮ ದೇವಿಗೆ ಉಚ್ಚಂಗೆಮ್ಮದೇವಿ ಅಲಂಕಾರ


ಮಲೇಬೆನ್ನೂರು ವೀರಭದ್ರೇಶ್ವರ ದೇವಸ್ಥಾನದಲ್ಲಿ ಭದ್ರಕಾಳಿ ದೇವಿಗೆ ಚಂದ್ರಘಂಟಾ ಅಲಂಕಾರ


ಮಲೇಬೆನ್ನೂರು ಎ.ಕೆ. ಕಾಲೋನಿ ಶ್ರೀ ಹಟ್ಟಿ ದುರ್ಗಾಂಬಿಕೆ ದೇವಿಗೆ ವಿಶೇಷ ಅಲಂಕಾರ

## ಜಗಳೂರು; ಸೋಲಾರ್ ದೀಪ ಅಳವಡಿಕೆ ಗ್ರಾಪಂ ಉಪಾಧ್ಯಕ್ಷೆಯ ಮೇಲೆ ಹಲ್ಲೆ

ಜಗಳೂರು, ಅ.17- ಸೋಲಾರ್ ದೀಪ ಅಳವಡಿಸುವ ವಿಚಾರವಾಗಿ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷೆ ನಿಂಗಮ್ಮ ಅವರ ಮೇಲೆ ವ್ಯಕ್ತಿಯೊಬ್ಬ ಹಲ್ಲೆ ಮಾಡಿರುವ ಘಟನೆ ತಾಲ್ಲೂಕಿನ ಚಿಕ್ಕಬನ್ನಿಹಟ್ಟಿ ಗ್ರಾಮದಲ್ಲಿ ಸೋಮವಾರ ಸಂಜೆ ನಡೆದಿದೆ.

ಹೊಸಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಕ್ಕಬನ್ನಿಹಟ್ಟಿ ಗ್ರಾಮದಲ್ಲಿ ಪಂಚಾಯಿತಿಯ ವತಿಯಿಂದ ಸೋಲಾರ್ ದೀಪ ಅಳವಡಿಸಿದ್ದಾರೆ. ಇದೇ ವಿಚಾರವನ್ನಿಟ್ಟುಕೊಂಡ ಮಾರಪ್ಪ, ನಮ್ಮ ಮನೆಯ ಮುಂದೆ ಸೋಲಾರ್ ದೀಪ ಅಳವಡಿಸಬೇಕು, ಇಲ್ಲದಿದ್ದರೆ ಎಲ್ಲಾ ಕಂಬಗಳನ್ನು ಮುರಿದು ಹಾಕುತ್ತೇನೆ ಎಂದು ಉಪಾಧ್ಯಕ್ಷೆ ನಿಂಗಮ್ಮ ಅವರೊಂದಿಗೆ ಜಗಳವಾಡಿದ್ದಾನೆ.

ನಂತರ ಮನೆಯಲ್ಲಿ ಒಂಟಿ ಇರುವಾಗ ಏಕಾಏಕಿ ನುಗ್ಗಿದ ಮಾರಪ್ಪ ನಿಂಗಮ್ಮಳನ್ನು ಹಿಗ್ಗಾಮುಗ್ಗಾ ಹೊಡೆದು ಹಲ್ಲೆ ಮಾಡಿದ್ದಾನೆ. ಅಲ್ಲದೇ ನಿಂದನೆ ಮಾಡಿ, ಕೊಲೆ ಬೆದರಿಕೆ ಹಾಕಿದ್ದಾನೆ. ಗಾಯಗೊಂಡಿದ್ದ ಉಪಾಧ್ಯಕ್ಷೆ ನಿಂಗಮ್ಮ ಅವರನ್ನು ಜಗಳೂರಿನ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜಗಳೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

## ಐ.ಟಿ. ದಾಳಿ ಹಣ ಬಿಜೆಪಿಗೆ ಸೇರಿದ್ದು



ಬೆಂಗಳೂರು, ಅ.17 - ಕಳೆದ ಮೂರು ದಿನಗಳಿಂದ ನಡೆದ ಐ.ಟಿ. ದಾಳಿಯಲ್ಲಿ ಕೆಲವು ಡೈರಿ, ಪುಸ್ತಕಗಳು ಪತ್ತೆಯಾಗಿರುವ ಬಗ್ಗೆ ನನಗೆ ಮಾಹಿತಿ ಬಂದಿದೆ. ಈ ದಾಖಲೆಗಳು ಬಹಿರಂಗಗೊಂಡರೆ, ದಾಳಿಯಲ್ಲಿ ಸಿಕ್ಕಿರುವ ಹಣ ಯಾರಿಗೆ ಸಂಬಂಧಿಸಿದ್ದು ಎಂಬ ಸತ್ಯಾಂಶ ಹೊರಬರುತ್ತದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಭ್ರಷ್ಟಾಚಾರ ಗಳನ್ನು ಮಾಡಿರುವುದು ಬಿಜೆಪಿ ಪಕ್ಷ. ಇಡೀ ಭ್ರಷ್ಟಾಚಾರಕ್ಕೆ ಬಿಜೆಪಿಯೇ ಅಡಿಪಾಯ. ಅದು ಭ್ರಷ್ಟಾಚಾರದ ಹಿಮಾಲಯ ಇದ್ದಂತೆ. ಹೀಗಾಗಿ ಕರ್ನಾಟಕದ ಜನತೆ ಅವರನ್ನು ಅಧಿಕಾರದಿಂದ ಕಿತ್ತೆಸೆದಿದ್ದಾರೆ ಎಂದು ಹೇಳಿದ್ದಾರೆ.

ಈಗ ನಡೆದಿರುವ ಐಟಿ ದಾಳಿಯಲ್ಲಿ ಸಿಕ್ಕಿರುವ ಹಣ ಬಿಜೆಪಿಗೆ ಸೇರಿದ್ದು, ಈ ಹಣಕ್ಕೂ ಕಾಂಗ್ರೆಸ್ ಪಕ್ಷಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ. ಈ ಗುತ್ತಿಗೆದಾರರಿಗೆ ಕಾಮಗಾರಿಗಳನ್ನು ನೀಡಿರುವುದು ಬಿಜೆಪಿ ಸರ್ಕಾರ. ಇದು ಬಿಜೆಪಿಯ ಪಾಪದ ಕೂಸು ಎಂದು ತಿಳಿಸಿದರು. ಕಾಂಗ್ರೆಸ್ ಹೈಕಮಾಂಡ್ ನಡುಗುತ್ತಿದೆ ಎಂಬ ಮಾಜಿ ಉಪ ಮುಖ್ಯಮಂತ್ರಿ ಆರ್. ಅಶೋಕ್ ಅವರ ಹೇಳಿಕೆ ವಿಚಾರವಾಗಿ ಕೇಳಿದಾಗ, ನಡುಗುತ್ತಿರುವುದು ಕಾಂಗ್ರೆಸ್ ಹೈಕಮಾಂಡ್ ಅಲ್ಲ, ಬಿಜೆಪಿ ಹೈಕಮಾಂಡ್ ಎಂದು ಹೇಳಿದರು.

## ಮೈಸೂರು ದಸರಾದಲ್ಲಿ ಸಿರಿಗೆರೆ ವಿದ್ಯಾರ್ಥಿಗಳ ಕಲಾ ಪ್ರದರ್ಶನ



ಸಿರಿಗೆರೆ, ಅ. 17- ವಿಶ್ವವಿಖ್ಯಾತ ಮೈಸೂರು ದಸರಾ ಉತ್ಸವದಲ್ಲಿ ಸಿರಿಗೆರೆ ತರಳಬಾಳು ಕಲಾಸಂಘದ ವಿದ್ಯಾರ್ಥಿಗಳಿಂದ ವಿವಿಧ ಕಲಾ ಪ್ರಕಾರಗಳು ಪ್ರದರ್ಶನಗೊಳ್ಳಲಿವೆ. ಇದೇ ದಿನಾಂಕ 21ರ ಶನಿವಾರ ಸಂಜೆ 5.15 ಕ್ಕೆ ಅರಮನೆ ಮುಂಭಾಗದ ಪ್ರದಾನ ವೇದಿಕೆಯಲ್ಲಿ ಮಲ್ಲಗಂಬ, ಮಲ್ಲಹಗ್ಗ, ಯಕ್ಷಗಾನ, ಜಡೆ ಕೋಲಾಟ ಮತ್ತು ಭರತನಾಟ್ಯ ಕಲೆಗಳನ್ನು ಪ್ರದರ್ಶಿಸಲಿದ್ದಾರೆ.

## ಒತ್ತಡದಿಂದ ಹೊರಬರಲು ಕ್ರೀಡೆ ಉತ್ತಮ ಮಾರ್ಗ : ಎಸ್ಪಿ ಉಮಾ

ದಾವಣಗೆರೆ, ಅ. 11- ಕ್ರೀಡೆಗಳು ನಾಯಕತ್ವದ ಗುಣಗಳನ್ನು, ತಂಡ ಮನೋಭಾವವನ್ನು ಬೆಳೆಸುತ್ತವೆ. ವ್ಯಕ್ತಿತ್ವ ವಿಕಸನಕ್ಕೆ ಕ್ರೀಡಾತ್ಮಕ ಮನೋಭಾವ ಬೆಳೆಸಿಕೊಳ್ಳಲು ಕ್ರೀಡಾಭ್ಯಾಸವು ಹೇಗೆ ಪೂರಕವಾಗುತ್ತದೆ ಎಂದು ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಜೀವನವನ್ನು ಉದಾಹರಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಹೇಳಿದರು.

ನಗರದ ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಸಂಶೋಧನಾ ಕೇಂದ್ರದಲ್ಲಿ ಜರುಗಿದ ವಾರ್ಷಿಕ ಕ್ರೀಡಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅವರು ವಿದ್ಯಾ ರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ವೈದ್ಯಕೀಯ ವಿದ್ಯಾರ್ಥಿ ಜೀವನದಲ್ಲಿ ಸಹಜವಾಗಿ ಒತ್ತಡಗಳು ಇರುತ್ತವೆ. ಇಂತಹ ಒತ್ತಡಗಳಿಂದ ಹೊರಬರಲು ಮಾದಕ ದ್ರವ್ಯಗಳಂತಹ ದುರಭ್ಯಾಸಗಳಿಗೆ ದಾಸರಾಗುವ ಬದಲು, ಕ್ರೀಡೆಗಳನ್ನು ಉತ್ತಮ ಸಾಧನವಾಗಿ ಮಾಡಿಕೊಳ್ಳಬೇಕು ಎಂದು ಅಭಿಮತ ವ್ಯಕ್ತಪಡಿಸಿದರು.

ಪಂಜು ಬೆಳಗಿಸುವ ಮೂಲಕ ಕ್ರೀಡಾ ದಿನಾಚರಣೆಗೆ ವಿದ್ಯುಕ್ತ ಚಾಲನೆ ನೀಡಿದ ಅವರಿಗೆ ಇದೇ ಸಂದರ್ಭದಲ್ಲಿ



ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ಬಿ.ಎಸ್. ಪ್ರಸಾದ್ ಮಾತನಾಡಿ, ಶಿಸ್ತು ಆರೋಗ್ಯಕ್ಕೆ ಪೂರಕವಾದ ಹವ್ಯಾಸಗಳು ನಿರಂತರ ಕ್ರೀಡಾಭ್ಯಾಸವು ಶೈಕ್ಷಣಿಕ ಕ್ಷೇತ್ರದಲ್ಲಿ ಮಾತ್ರವಲ್ಲದೆ, ನಮ್ಮ ಜೀವನದ ಇತರೆ ಕ್ಷೇತ್ರಗಳಲ್ಲಿಯೂ ಸಹಕಾರಿಯಾಗಿದೆ ಎಂದು ತಿಳಿಸಿದರು.

ವೈದ್ಯಕೀಯ ನಿರ್ದೇಶಕರಾದ ಡಾ. ಅರುಣ್ ಕುಮಾರ್ ಅಜ್ಜಪ್ಪ ಮಾತನಾಡಿ, ತಮ್ಮ ವಿದ್ಯಾರ್ಥಿ ಜೀವನದ ಕ್ರೀಡಾ ದಿನಗಳ ಅನುಭವಗಳನ್ನು ಹಂಚಿಕೊಂಡು ಪ್ರೋತ್ಸಾಹದ ನುಡಿಗಳನ್ನು ಆಡಿದರು.

ಹಿರಿಯ ವೈದ್ಯರುಗಳಾದ ಡಾ. ವಿಜಯ್ ಕುಮಾರ್ ಬಿ. ಜತ್ತಿ, ಡಾ|| ರಾಘವೇಂದ್ರ, ಡಾ|| ಜಯಸಿಂಹ ಡಾ|| ಸಂತೋಷ್ ಕುಮಾರ್ ಮುಂತಾದವರು ಭಾಗವಹಿಸಿದ್ದರು.

### ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯದಲ್ಲಿ ವಾರ್ಷಿಕ ಕ್ರೀಡಾ ದಿನಾಚರಣೆ

ವೈದ್ಯಕೀಯ ವಿದ್ಯಾರ್ಥಿ ಸಂಘ ಸಮನ್ವಯ-2023 ಕ್ರೀಡಾ ಸಮಿತಿಯ ಅಧ್ಯಕ್ಷ ಡಾ|| ಪಾರ್ಥಸಾರಥಿ ಸ್ವಾಗತಿಸಿದರು. ಕ್ರೀಡಾ ಸಮಿತಿ ಕೋ ಛೇರ್ಮನ್‌ಗಳಾದ ಡಾ. ಮನು ಮುಖ್ಯ ಅತಿಥಿಗಳನ್ನು ಪರಿಚಯಿಸಿದರು. ಡಾ. ಎ.ಎನ್. ಪ್ರದೀಪ್ ವಾರ್ಷಿಕ ಕ್ರೀಡಾ ವರದಿ ಸಲ್ಲಿಸಿದರು. ಡಾ. ವಿ.ಎಸ್. ಹರೀಶ್ ಕುಮಾರ್ ವಂದಿಸಿದರು.

ನಂತರ ವಿದ್ಯಾರ್ಥಿಗಳು ಮಾರ್ಚ್ ಫಾಸ್ಟ್ ನಡೆಸಿದರು. ಶಾಟ್‌ಪುಟ್, ಜಾವಲಿನ್ ಥ್ರೋ ಬಾಲ್, ಡಿಸ್ಕಸ್ ಥ್ರೋ ಮುಂತಾದ ಕ್ರೀಡೆಗಳಲ್ಲಿ ನೂರಾರು ಸಂಖ್ಯೆಗಳಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿ ಯರು, ವೈದ್ಯರು ಉತ್ಸುಕತೆಯಿಂದ ಪಾಲ್ಗೊಂಡಿದ್ದರು. ಕೊನೆಯಲ್ಲಿ ವಿವಿಧ ಕ್ರೀಡೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಪೊಲೀಸ್ ಕ್ವಾಟ್ರಸ್, ಎಂಸಿಸಿ ಎ ಬ್ಲಾಕ್, ವಿನೋಬ ನಗರ, 1ನೇ, 2ನೇ ಮೇನ್, ಮುದ್ದಳ್ಳಿ ತೋಟ, ಪಿ.ಜೆ ಬಡಾವಣೆ, ಎ.ವಿ.ಕೆ ಕಾಲೇಜ್ ರಸ್ತೆ, ಪಿ.ಬಿ ರಸ್ತೆ, ಅರುಣ ಚಿತ್ರ ಮಂದಿರ ಸರ್ಕಲ್, ರಾಮ್ ಅಂಡ್ ಕೋ ಸರ್ಕಲ್, ಮಹಾನಗರ ಪಾಲಿಕೆ ವ್ಯಾಪ್ತಿಯ ಬೆವಿಕಂ ಆಫೀಸ್, ಹಳೆ ಬಸ್ ನಿಲ್ದಾಣ, ಬಡಾವಣೆ ಪೊಲೀಸ್ ಸ್ಟೇಷನ್ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

WANTED
SENIOR OFFICE EXECUTIVE-1 (MALE)
(B.COM/ M.COM / M.B.A)
HAVING EXPERIENCE IN BANKING.
Age Limit : Below 35 years
Please send your resume to: karavalidvg@yahoo.com or
KARAVALI SOUHARDA CR. CO-OP SOCIETY LTD.,
Kundwada Road, Near Buntara Bhavana, Davangere-577006.
Contact No : 9900870019, 9844111334

## ಸಂಕ್ಷಿಪ್ತ ಸುದ್ದಿ

**ಪಾಕ್ ಪೊಲೀಸ್, ಅರೆಸೇನಾ ಪಡೆ ಮೇಲೆ ಆಫ್ಘಾನ್ ಗುಂಪಿನ ದಾಳಿ**

ಕರಾಚಿ : ಕಳ್ಳಸಾಗಣೆ ತಡೆ ದಾಳಿ ನಡೆಸುತ್ತಿದ್ದ ಪೊಲೀಸ್, ಅರೆಸೇನಾ ಪಡೆ ಹಾಗೂ ಸುಂಕ ಅಧಿಕಾರಿಗಳ ತಂಡದ ಮೇಲೆ ಕರಾಚಿಯ ಆಫ್ಘಾನಿಸ್ತಾನದ ಗುಂಪು ದಾಳಿ ನಡೆಸಿದೆ. ಶಸ್ತ್ರಾಸ್ತ್ರ ಹಿಡಿದ ಹಲವಾರು ಆಫ್ಘಾನ್ ಜನರು ದಾಳಿ ನಡೆಸಿರುವ ದೃಶ್ಯ ವೈರಲ್ ಆಗಿದೆ. ಕರಾಚಿಯ ಅತ್ಯಂತ ಜನನಿಬಿಡ ವಾಣಿಜ್ಯ ಕೇಂದ್ರವಾದ ತಾರಿಕ್ ರಸ್ತೆಯಲ್ಲಿ ಈ ಘಟನೆ ನಡೆದಿದೆ.

**ಪ್ರಶ್ನೆಗಾಗಿ ಲಂಚ : ಮೊಯಿತ್ರ ವಿರುದ್ಧದ ದೂರು ನೈತಿಕ ಸಮಿತಿಗೆ ವರ್ಗ**

ನವದೆಹಲಿ : ತೃಣಮೂಲ ಕಾಂಗ್ರೆಸ್ ಸಂಸದೆ ಮೊಹುವಾ ಮೊಯಿತ್ರ ಅವರು ಹಣ ಪಡೆದು ಲೋಕಸಭೆಯಲ್ಲಿ ಪ್ರಶ್ನೆ ಕೇಳಿದ್ದಾರೆ ಎಂದು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಆರೋಪಿಸಿರುವ ವಿಷಯವನ್ನು ಸದನದ ನೈತಿಕ ಸಮಿತಿಗೆ ವಹಿಸಲಾಗಿದೆ. ತೃಣಮೂಲ ಕಾಂಗ್ರೆಸ್ ನಾಯಕಿ ಮೊಯಿತ್ರ ಹಾಗೂ ಉದ್ಯಮಿಯೊಬ್ಬರ ನಡುವೆ ಹಣದ ವ್ಯವಹಾರ ನಡೆದಿರುವ ಬಗ್ಗೆ ವಕೀಲರೊಬ್ಬರು ಸಾಕ್ಷಿ ನೀಡಿದ್ದಾರೆ ಎಂದು ದುಬೆ ಹೇಳಿದ್ದರು.

**ಚುನಾವಣಾ ಉದ್ದೇಶಕ್ಕೆ ಸೈನ್ಯದ ಬಳಕೆ : ಖರ್ಗೆ ಆಕ್ಷೇಪ**

ನವದೆಹಲಿ : ಸರ್ಕಾರದ ಯೋಜನೆಗಳಿಗೆ ಉತ್ತೇಜನ ನೀಡಲು ದೇಶದ 822 ಕಡೆ ಸೆಲ್ಫಿ ತಾಣಗಳನ್ನು ತೆರೆಯಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ತಿಳಿಸಿರುವುದಕ್ಕೆ ಆಕ್ಷೇಪಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸೈನ್ಯವನ್ನು ರಾಜಕೀಯಕ್ಕೆ ಬಳಸಿಕೊಳ್ಳಲಾಗುತ್ತಿದೆ ಎಂದು ಆಕ್ಷೇಪಿಸಿದ್ದಾರೆ. ಸೈನಿಕರ ಶೌರ್ಯಕ್ಕೆ ಉತ್ತೇಜಿಸುವ ಬದಲು ಸರ್ಕಾರಿ ಯೋಜನೆಗಳ ಪ್ರಚಾರ ಮಾಡಲಾಗುತ್ತಿದೆ, ಸೈನ್ಯವನ್ನು ಚುನಾವಣಾ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತಿದೆ ಎಂದೂ ಖರ್ಗೆ ದೂರಿದ್ದಾರೆ.

**ಐಸಿಐಸಿಐ, ಕೋಟಕ್ ಮಹೀಂದ್ರ ಬ್ಯಾಂಕ್‌ಗಳಿಗೆ ದಂಡ**

ಮುಂಬೈ : ಕೆಲ ನಿಯಂತ್ರಕ ನಿಯಮಗಳನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಐ.ಸಿ.ಐ.ಸಿ.ಐ. ಬ್ಯಾಂಕ್‌ಗೆ 12.19 ಕೋಟಿ ರೂ. ಹಾಗೂ ಕೋಟಕ್ ಮಹೀಂದ್ರ ಬ್ಯಾಂಕ್‌ಗೆ 3.95 ಕೋಟಿ ರೂ. ದಂಡ ವಿಧಿಸಿರುವುದಾಗಿ ರಿಸರ್ವ್ ಬ್ಯಾಂಕ್ ತಿಳಿಸಿದೆ.

**ಮನ್ ಕಿ ಬಾತ್ ಮೂರನೇ ಪುಸ್ತಕ ಪ್ರಕಟಣೆಗೆ**

ನವದೆಹಲಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ರೇಡಿಯೋ ಕಾರ್ಯಕ್ರಮವಾದ 'ಮನ್ ಕಿ ಬಾತ್'ನ ಮೂರನೇ ಪುಸ್ತಕ ಶೀಘ್ರದಲ್ಲೇ ಪ್ರಕಟಗೊಳ್ಳಲಿದೆ. ಈ ಕುರಿತ ಮೊದಲ ಪುಸ್ತಕವನ್ನು 2017ರ ಮೇ ಹಾಗೂ ಎರಡನೇ ಪುಸ್ತಕವನ್ನು 2019ರ ಮಾರ್ಚ್‌ನಲ್ಲಿ ಪ್ರಕಟಿಸಲಾಗಿತ್ತು.

**ಸ್ವಚ್ಛತಾ ಅಭಿಯಾನದಿಂದ 117 ಕೋಟಿ ರೂ. ಆದಾಯ**

ನವದೆಹಲಿ : ಕೇಂದ್ರ ಸರ್ಕಾರ ಪ್ರಸಕ್ತ ನಡೆಸುತ್ತಿರುವ ಸ್ವಚ್ಛತಾ ಅಭಿಯಾನದ ವೇಳೆ, ಗುಜರಿ ಮಾರಾಟದಿಂದ 117 ಕೋಟಿ ರೂ. ಆದಾಯ ಬಂದಿದೆ. ಇದರ ಜೊತೆಗೆ 32.54 ಲಕ್ಷ ಚದರ ಅಡಿ ಜಾಗ ಸ್ವಚ್ಛವಾಗಿ ಬಳಕೆಗೆ ಲಭ್ಯವಾಗಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ.

**ಅಕ್ರಮ ವಲಸಿಗರ ಹಸ್ತಾಂತರಕ್ಕೆ ಪಾಕ್ ಸೈನ್ಯದ ಬೆಂಬಲ**

ಇಸ್ಲಾಮಾಬಾದ್ : ಬರುವ ನವೆಂಬರ್ 1ರಿಂದ ಪಾಕಿಸ್ತಾನದಲ್ಲಿರುವ ಅಕ್ರಮ ವಲಸಿಗರನ್ನು ಹಸ್ತಾಂತರಿಸುವ ಸರ್ಕಾರದ ಕ್ರಮಕ್ಕೆ ಬೆಂಬಲಿಸುವುದಾಗಿ ಪಾಕ್ ಸೈನ್ಯ ತಿಳಿಸಿದೆ. ಅಕ್ರಮ ವಲಸಿಗರಲ್ಲಿ ಬಹುತೇಕರು ಆಫ್ಘಾನ್ ಜನರಾಗಿದ್ದಾರೆ.

# ವಿಕಲಚೇತನರ ಕ್ಷೇತ್ರದಲ್ಲಿ ಸಾಧನೆಗೈದ ವ್ಯಕ್ತಿ, ಸಂಸ್ಥೆಗಳಿಂದ ರಾಜ್ಯ ಪ್ರಶಸ್ತಿಗೆ ಅರ್ಜಿ

ದಾವಣಗೆರೆ, ಅ. 17 - ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ಪ್ರಸಕ್ತ ಸಾಲಿನಲ್ಲಿ ವಿಕಲಚೇತನರ ಕ್ಷೇತ್ರದಲ್ಲಿ ಸಾಧನೆಗೈದ ವ್ಯಕ್ತಿ, ಸಂಸ್ಥೆ ಮತ್ತು ವಿಶೇಷ ಶಾಲೆಗಳಲ್ಲಿ 15 ವರ್ಷಗಳಿಗೂ ಮೇಲ್ಪಟ್ಟು ಸೇವೆ ಸಲ್ಲಿಸಿರುವ ಹಾಗೂ ಸೇವೆಯಲ್ಲಿರುವ ಶಿಕ್ಷಕರಿಗೆ ರಾಜ್ಯ ಪ್ರಶಸ್ತಿ ನೀಡಲು ಅರ್ಜಿಯನ್ನು ಆಹ್ವಾನಿಸಲಾಗಿದೆ.

ಆಸಕ್ತರು ನಿಗದಿತ ನಮೂನೆಗಳನ್ನು ಇಲಾಖೆಯ ವೆಬ್‌ಸೈಟ್ WWW. dwdsc.kar.nic.in ಮೂಲಕ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ಇದೇ ದಿನಾಂಕ 25 ರೊಳಗಾಗಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣಾ ಇಲಾಖೆ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.08192-263936 ಸಂಪರ್ಕಿಸಬಹುದಾಗಿದೆ.

# ರಾಜಕೀಯಕ್ಕೆ ಹೊಸ ಮುಖಗಳ ಅವಶ್ಯಕತೆ ಇದೆ



**ಜಿ.ಬಿ. ವಿನಯ್‌ಕುಮಾರ್**

ದಾವಣಗೆರೆ,ಅ.17- ರಾಜಕೀಯ ಕ್ಷೇತ್ರಕ್ಕೆ ಹೊಸ ಮುಖಗಳ ಅವಶ್ಯಕತೆ ಹಾಗೂ ಜನಸಾಮಾನ್ಯರ ಅಭಿವೃದ್ಧಿಗೆ ಸ್ಪಂದಿಸುವವರು ಬೇಕಾಗಿದ್ದಾರೆ ಎಂದು ಇನ್‌ಸೈಟ್ ಐಎಎಸ್ ಶಿಕ್ಷಣ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಜಿ.ಬಿ ವಿನಯ್ ಕುಮಾರ್ ಹೇಳಿದರು.

ತಾಲ್ಲೂಕಿನ ಕುಣಿಬೆಳಕೆರೆ ಗ್ರಾಮದಲ್ಲಿ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಕಳಸಾರೋಹಣದ ಧಾರ್ಮಿಕ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವಲ್ಲಿ ಮುಂದಾಗಬೇಕಾಗಿದೆ. ಮನೆಯಲ್ಲಿ ಒಬ್ಬ ಅಧಿಕಾರಿ ಇದ್ದರೆ ಕುಟುಂಬದ ನಿರ್ವಹಣೆ ಸುಗಮವಾಗಿ ಸಾಗಲಿದೆ. ಅದೇ ರೀತಿಯಾಗಿ ಮನೆಗೊಬ್ಬ ಅಧಿಕಾರಿಗಳನ್ನು ನೀಡಬೇಕೆಂಬ ಮಹದಾಸೆಯಿಂದ ನಾನು ಇನ್‌ಸೈಟ್ ಐಎಎಸ್ ಶಿಕ್ಷಣ ಸಂಸ್ಥೆ ಪ್ರಾರಂಭಿಸಿದ್ದೇನೆ. ನಮ್ಮ ಸಂಸ್ಥೆಯಲ್ಲಿ ಸಾವಿರಾರು ಐಎಎಸ್ ಮತ್ತು ಐಪಿಎಸ್ ಶಿಕ್ಷಣ ಪಡೆದು ಉನ್ನತ ಮಟ್ಟದ ಅಧಿಕಾರಿಗಳಾಗಿದ್ದಾರೆ. ಅದೇ ರೀತಿ ಗ್ರಾಮೀಣ ಪ್ರದೇಶಗಳಲ್ಲಿ ಮಕ್ಕಳು ಶಿಕ್ಷಣ ಪಡೆಯಬೇಕು ಎಂದು ಅವರು ಸಲಹೆ ನೀಡಿದರು.

ಜನಸಾಮಾನ್ಯರ ಕೈಗೆ ಸಿಗುವಂತ ಜನಪ್ರತಿನಿಧಿಗಳ ಅವಶ್ಯಕತೆ ಇದೆ. ಹಾಗೆ ರಾಜಕೀಯ ಇಚ್ಛಾಶಕ್ತಿ ಇರುವಂತವರ ಅವಶ್ಯಕತೆ ಇದೆ. ಮತ್ತೆ ನಿಮ್ಮ ಸಮಸ್ಯೆಗಳಿಗೆ ಮತ್ತು ಅಭಿವೃದ್ಧಿ ಮಾಡುವಂತಹ ಪ್ರಜ್ಞಾವಂತ ರಾಜಕೀಯ ಪ್ರತಿನಿಧಿಬೇಕಾಗಿದೆ.

ಮುಂದೆ ನಾನೂ ಕೂಡ ಸಂಸದ ಸ್ಥಾನಕ್ಕೆ ಸ್ಪರ್ಧಿಸಲು ಮುಂದಾಗಿದ್ದು, ನಿಮ್ಮ ಪ್ರೀತಿ, ವಿಶ್ವಾಸ ಬೇಕಾಗಿದೆ ಎಂದರು.

# ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾದ ಸ್ಪರ್ಧಿಗಳಿಗೆ ಅಭಿನಂದನೆ



ದಾವಣಗೆರೆ, ಅ.17- ನವದೆಹಲಿಯ ತ್ಯಾಗರಾಜ್ ಕ್ರೀಡಾಂಗಣದಲ್ಲಿ ಇದೇ 16 ರಿಂದ 20ರವರೆಗೆ ನಡೆಯಲಿರುವ ಅಖಿಲ ಭಾರತ ನಾಗರಿಕ ಸೇವಾ ಕುಸ್ತಿ ಹಾಗೂ ಕಬಡ್ಡಿ ಪಂದ್ಯಾವಳಿಗೆ ರಾಜ್ಯದಿಂದ ಆಯ್ಕೆಯಾಗಿರುವ ಕ್ರೀಡಾಪಟುಗಳಾದ ಸಾಂಖ್ಯಿಕ ಇಲಾಖೆಯ ಮಂಜಮ್ಮ, ಆರೋಗ್ಯ ಇಲಾಖೆಯ ಸುಧಾ ಬಿ., ಮಲ್ಲೇಶ್.ಬಿ.ಹೆಚ್., ಕರಿಬಸಪ್ಪ.ಬಿ.ಎನ್, ಆಹಾರ ಇಲಾಖೆಯ ರವಿ ಹಿಪ್ಪರಗಿ, ಆರ್‌ಡಿಪಿಆರ್ ಇಲಾಖೆಯ ವಿದ್ಯಾಭೂಷಣ ಎ.ಇ., ಶಿಕ್ಷಣ ಇಲಾಖೆಯ ಷಂಶುದ್ದೀನ್ ಹಾಗೂ ಕಬಡ್ಡಿ ಪಂದ್ಯಾವಳಿಯಲ್ಲಿ ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿರುವ ಕ್ರೀಡಾಪಟುಗಳಾದ ಆರೋಗ್ಯ ಇಲಾಖೆಯ ಅನು ಆರ್, ಶಿಕ್ಷಣ ಇಲಾಖೆಯ ರೂಪಾ.ಬಿ, ನಾಗರಾಜ್.ಆರ್. ಇವರುಗಳಿಗೆ ಜಿಲ್ಲಾ ಸರ್ಕಾರಿ ನೌಕರರ ಸಂಘದಿಂದ ಅಭಿನಂದಿಸಲಾಯಿತು.

ಸಂಘದ ಅಧ್ಯಕ್ಷ ವೀರೇಶ್ ಎಸ್. ಒಡೇನಪುರ, ಕಾರ್ಯದರ್ಶಿ ಗುರುಮೂರ್ತಿ.ಸಿ, ಖಜಾಂಚಿ ತಿಪ್ಪೇಸ್ವಾಮಿ.ಬಿ.ಆರ್, ರಾಜ್ಯ ಪರಿಷತ್ ಸದಸ್ಯೆ ಮಂಜಮ್ಮ, ರಾಜ್ಯ ಜಂಟಿ ಕಾರ್ಯದರ್ಶಿ ಶಿವಾನಂದ ದಳವಾಯಿ, ಆಂತರಿಕ ಲೆಕ್ಕ ಪರಿಶೋಧಕ ಶ್ರೀನಿವಾಸ ರೆಡ್ಡಿ ಆರ್. ರಾಯರೆಡ್ಡಿ, ಕ್ರೀಡಾ ಕಾರ್ಯದರ್ಶಿ ಗಣೇಶ.ಡಿ. ಎನ್. ಮತ್ತು ಪುನೀತ್ ಶಂಕರ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಕೆ. ಆರ್. ಜಯಲಕ್ಷ್ಮಿ ಬಾಯಿ ಮತ್ತು ಅಧೀಕ್ಷಕರಾದ ಅರ್ಪಿತಾ ಕೆ.ಜೆ. ಹಾಗು ಇತರರು ಈ ಸಂದರ್ಭದಲ್ಲಿದ್ದರು.

# 'ನುಸಿ ಪೀಡೆ' ತಪ್ಪಿಸಲು ತಹಶೀಲ್ದಾರ್ ಮೊರೆ ಹೋದ ಹರಿಹರ ಗಂಗಾನಗರ ನಿವಾಸಿಗಳು



ಹರಿಹರ ಅ,17- ಇಲ್ಲಿನ ಎಪಿಎಂಸಿ ಆವರಣದಲ್ಲಿ ಇರುವಂತಹ ಅಕ್ಕಿ ಗೋಡೌನ್‌ನಲ್ಲಿರುವ ನುಸಿಗಳು ಮತ್ತು ಹುಳುಗಳು ಗಂಗಾನಗರ ಬಡಾವಣೆಯ ಮನೆಯನ್ನು ಆವರಿಸಿಕೊಂಡು ಊಟ, ನಿದ್ರೆ ಮಾಡುವುದಕ್ಕೂ ತೊಂದರೆ ಆಗುತ್ತಿದೆ. ನೆಮ್ಮದಿ ಜೀವನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಬಡಾವಣೆ ನಿವಾಸಿಗಳು ತಹಶೀಲ್ದಾರ್ ಪೃಥ್ವಿ ಸಾನಿಕಂರವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ನಗರಸಭೆ ಸದಸ್ಯ ಎಸ್.ಎಂ. ವಸಂತ ಮಾತನಾಡಿ, ಈ ವಿಚಾರಕ್ಕೆ ಸಂಬಂಧಿಸಿದಂತೆ ಅನೇಕ ಬಾರಿ ಎಪಿಎಂಸಿ ಗೋಡೌನ್ ಅಧಿಕಾರಿಗಳ ಗಮನಕ್ಕೆ ತಂದರೂ ಸಹಿತ ಅವರು ನಿರ್ಲಕ್ಷ್ಯ ತೋರಿದ್ದರಿಂದ ಇವತ್ತು ತಹಶೀಲ್ದಾರ್ ಕಚೇರಿಗೆ ಬಂದು ಪ್ರತಿಭಟನೆ ಮಾಡಿ ಮನವಿಯನ್ನು ಸಲ್ಲಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ತಹಶೀಲ್ದಾರರು ನಾಲ್ಕು ದಿನಗಳಲ್ಲಿ ಸಮಸ್ಯೆಗೆ ಪರಿಹಾರ ನೀಡುವುದಾಗಿ ಭರವಸೆ ನೀಡಿದ್ದಾರೆ. ನಾಲ್ಕು ದಿನಗಳ ನಂತರ ಯಾವುದೇ ರೀತಿಯ ಕ್ರಮ ತೆಗೆದು ಕೊಳ್ಳದೇ ಹೋದರೆ, ಮುಂದಿನ ದಿನಗಳಲ್ಲಿ ಎಪಿಎಂಸಿ ಆವರಣದಲ್ಲಿರುವ ಗೋಡೌನ್ ಹತ್ತಿರ ಇನ್ನೂ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ಮಾಡಲಾಗುತ್ತದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಗೌಸಪೀರ್, ರೂಪಾ , ಸರಸ್ವತಿ, ಶೋಭಾ, ಸಂತೋಷ್, ಅಫ್ರಿನ್ , ಜಮಾಲುದ್ದೀನ್, ಆಸೀಫ್, ರೋಷನ್, ಮುಸ್ತಫಾ, ಸವಿದಾಬಾನು ಹಾಗು ಇತರರು ಹಾಜರಿದ್ದರು.

## ನಾಲ್ಕನೇ ನವದುರ್ಗೆ ಕೂಷ್ಮಾಂಡ ದೇವಿಗೆ ನಮನ



ಸಿಂಹವಾಹಿನಿ ಕೂಷ್ಮಾಂಡ ದೇವಿಯೇ
ಸಂಹರಿಸಲು ದುಷ್ಟರ
ಧರೆಗಿಳಿಯುವವಳೆ
ಸಿಂಹಾಸನೇಶ್ವರಿಯೇ ಕಾಲಾತೀತಳೆ
ಸಿಂಹಾರೂಢೆ
ಶುಂಭನಿಶುಂಭಧ್ವಂಸಿಯೆ

ಅಷ್ಟಭುಜಳೆ ಸಪ್ತ ಆಯುಧಧಾರಿಯೆ
ಶ್ರೇಷ್ಠ ಜಪಮಾಲೆ ಹಿಡಿದ ಯೋಗಿನಿಯೆ
ಕಷ್ಟವ ಬಿಡಿಸಿ ಸುಖವನ್ನು ಕೊಡುವವಳೆ
ವಿಶಿಷ್ಟೆ ಸೂರ್ಯನೊಳಗೆ ನೆಲೆಸಿರುವವಳೆ

ತೇಜೋಮಯಿ ಜಗಕೆ ಶಕ್ತಿ ತುಂಬುವಳೆ
ನಿಜಾನಂದ ಕೊಡುವ ಜಗನ್ಮಾತೆಯೆ
ವಿಜಯೆ ಸದಾ ಜಯ ಪಡೆದುಕೊಳ್ಳುವಳೆ
ರಾಜರಾಜೇಶ್ವರಿ ರಾಜ್ಯ ಪಾಲಿಪಳೆ

ಸದ್ಭಕ್ತರ ಕರೆಗೆ ಓಡೋಡಿ ಬರುವವಳೆ
ಸದ್ಭಾವನೆಗೊಲಿವ ತ್ರಿಪುರಸುಂದರಿಯೆ
ಸದ್ಬುದ್ಧಿ ವಿದ್ಯೆ ಸದ್ಗತಿ ಕೊಟ್ಟು ಕಾಯುವಳೆ
ಸದ್ಬಾಲಗೋಪಾಲವಿಠಲಗಾಪ್ತಳೆ

- ಶ್ರೀ ಕೃಷ್ಣಾರ್ಪಣಮಸ್ತು, ರೂಪಶ್ರೀ ಶಶಿಕಾಂತ್

# ದ್ವಿತೀಯ ಸ್ಥಾನ ಪಡೆದ ಕ್ರೀಡಾ ವಸತಿ ನಿಲಯದ ಪುರುಷರ ಖೋ-ಖೋ ತಂಡ



ದಾವಣಗೆರೆ, ಅ. 17 - ಮೈಸೂರಿನ ಶ್ರೀ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ಪ್ರತಿಭಾನ್ವೇಷಣಾ ದಸರಾ ಸಿ. ಎಂ. ಕಪ್ ಕ್ರೀಡಾಕೂಟದ ಖೋ-ಖೋ ಸ್ಪರ್ಧೆಯಲ್ಲಿ ದಾವಣಗೆರೆ ಕ್ರೀಡಾ ವಸತಿ ನಿಲಯದ ಪುರುಷರ ಖೋ-ಖೋ ತಂಡವು ಉತ್ತಮ ಪ್ರದರ್ಶನ ನೀಡಿ, ದ್ವಿತೀಯ ಸ್ಥಾನ ಪಡೆದುಕೊಂಡಿದೆ.

ವಿಜೇತ ತಂಡದ ಪರ ಭರತ್‌ಕುಮಾರ್ ಪಿ.ಬಿ., ವೀರೇಶ್ (ತಂಡ ನಾಯಕ) ಅರ್ಜುನ್, ಲಕ್ಷ್ಮಣ, ಶರತ್, ಮಹಮ್ಮದ್ ತಾಸೀನ್, ವೇಣುಗೋಪಾಲ್, ಶರೀಫ್, ಗಗನ್, ಸಿದ್ಧಾರೂಢ ಮತ್ತು ಲಂಕೇಶ್, ಇಲಾಖೆಯ ಖೋ-ಖೋ ತರಬೇತುದಾರ ರಾಮಲಿಂಗಪ್ಪ. ಜೆ ಮತ್ತು ಶ್ರೀಮತಿ ಸುನೀತಾ ಎಂ.ಸಿ.ಇವರ ಬಳಿ ತರಬೇತಿ ಪಡೆಯುತ್ತಿದ್ದಾರೆ.

ಕ್ರೀಡಾ ವಸತಿ ನಿಲಯದ ಖೋ-ಖೋ ತಂಡಕ್ಕೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ.ಆರ್.ಜಯ ಲಕ್ಷ್ಮಿಬಾಯಿ, ಇಲಾಖೆಯ ಅಧೀಕ್ಷಕರಾದ ಅರ್ಪಿತ ಕೆ.ಜಿ., ಇಲಾಖೆಯ ತರಬೇತುದಾರರು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

# ಉದ್ಯೋಗ ಖಾತ್ರಿ ಯೋಜನೆಯ ಮಾಹಿತಿ ಜಾಗೃತಿ ರಥಕ್ಕೆ ಚಾಲನೆ



ರಾಣೇಬೆನ್ನೂರು, ಅ.17- ತಾಲ್ಲೂಕು ಪಂಚಾಯ್ತಿಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಮಾಹಿತಿ ಜಾಗೃತಿ ರಥಕ್ಕೆ ತಾ.ಪಂ. ಕಾರ್ಯನಿರ್ವಾಹಕಿ ಸುಮಲತಾ ಚಾಲನೆ ನೀಡಿ, ಗ್ರಾಮೀಣ ಭಾಗದ ಪ್ರತಿ ಮನೆಗೂ ಉದ್ಯೋಗ ನೀಡಲು ರಾಜ್ಯ, ಕೇಂದ್ರ ಸರ್ಕಾರಗಳ ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಲು ಮನವಿ ಮಾಡಿದರು.

# ಸಮ ಸ್ಥಾನಕ್ಕೆ ಜಾರಕಿಹೊಳಿ ಪಟ್ಟು

**(1ನೇ ಪುಟದಿಂದ)** ನಗರಕ್ಕೆ ವೇಣುಗೋಪಾಲ್ ಅವರನ್ನು ಕರೆಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆಗೂಡಿ ಬಣ ರಾಜಕೀಯ ನಿಲ್ಲಿಸುವಲ್ಲಿ ತಾತ್ಕಾಲಿಕವಾಗಿ ಯಶಸ್ವಿಯಾಗಿದ್ದಾರೆ. ಆದರೆ, ತಮ್ಮ ಪಟ್ಟನ್ನು ಜಾರಕಿಹೊಳಿ ಬಿಟ್ಟಿಲ್ಲ. ನಮಗೂ ಅಧಿಕಾರ ಕೊಡಿ. ನೀವು ಚುನಾವಣೆ ಸಂದರ್ಭದಲ್ಲಿ ಕಾರ್ಯಾಧ್ಯಕ್ಷ ಸ್ಥಾನ ನೀಡಿದ್ದರಿಂದ ಮುಂಬೈ ಕರ್ನಾಟಕದಲ್ಲಿ ಬಿಜೆಪಿ ಮಟ್ಟ ಹಾಕಿ ಕಾಂಗ್ರೆಸ್ ಹೆಚ್ಚು ಸ್ಥಾನ ಗೆಲ್ಲಲ್ಲು ಸಾಧ್ಯವಾಯಿತು ಎಂದು ತಿಳಿಸಿದ್ದಾರೆ. ತಮಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಿದರೆ, ಮುಂಬರುವ ಲೋಕಸಭಾ ಚುನಾವಣೆಯಲ್ಲಿ ವಾಲ್ಮೀಕಿ ಸಮುದಾಯ ಪಕ್ಷದ ಪರವಾಗಿ ಗಟ್ಟಿಯಾಗಿ ನಿಲ್ಲುತ್ತದೆ. ನಮಗೆ ಮುಂಬೈ ಕರ್ನಾಟಕದಲ್ಲಿ ಹೆಚ್ಚು ಸ್ಥಾನ ಗೆಲ್ಲಬಹುದು ಎಂದು ಒತ್ತಾಯ ಮಾಡಿದ್ದಾರೆಯೇ ಹೊರತು, ಶಿವಕುಮಾರ್ ವಿರುದ್ಧ ಯಾವುದೇ ರೀತಿಯ ಗುರುತರ ಆರೋಪ ಹೊರಿಸುವ ಪ್ರಯತ್ನ ಮಾಡಿಲ್ಲ. ಕಳೆದ ಕೆಲವು ದಿನಗಳ ಹಿಂದಷ್ಟೇ ಇದೇ ಸಮುದಾಯಕ್ಕೆ ಸೇರಿದ ಸಹಕಾರಿ ಸಚಿವ ಕೆ.ಎನ್.ರಾಜಣ್ಣ, ಸಂಪುಟದಲ್ಲಿ ಮೂವರು ಉಪ ಮುಖ್ಯಮಂತ್ರಿ ಸ್ಥಾನ ಸೃಷ್ಟಿಸುವಂತೆ ವರಿಷ್ಠರಿಗೆ ಬಹಿರಂಗವಾಗಿ ಮನವಿ ಮಾಡಿದ್ದರು. ಇದರ ಬೆನ್ನಲ್ಲೇ ಜಾರಕಿಹೊಳಿ ಕುಟುಂಬ ಉಪ ಮುಖ್ಯಮಂತ್ರಿ ಹುದ್ದೆಗಾಗಿ ಬಣ ರಾಜಕೀಯ ಮುಂದಿಟ್ಟುಕೊಂಡು ಬಹಿರಂಗವಾಗಿ ಅಖಾಡಕ್ಕಿಳಿದಿದೆ.

# 7 ದಿನಗಳ ನಂತರ ನೀರು ಸಾಧ್ಯತೆ

**(1ನೇ ಪುಟದಿಂದ)** ಬಾತಿ ವೀರೇಶ್ ನೇತೃತ್ವದ ಬಿಜೆಪಿ ನಿಯೋಗವು ಡಿಸಿಎಂ ಡಿ.ಕೆ. ಶಿವಕುಮಾರ್ ಮತ್ತು ಸಚಿವ ಮಧು ಬಂಗಾರಪ್ಪ ಅವರನ್ನು ಭೇಟಿ ಮಾಡಿ ಬಲದಂಡೆ ನಾಲೆಯಲ್ಲಿ ಸತತವಾಗಿ ನೀರು ಹರಿಸುವಂತೆ ಮನವಿ ಮಾಡಿದ್ದರು. ಭದ್ರಾ ಯೋಜನಾ ವ್ಯಾಪ್ತಿಯ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳದ ಅಧ್ಯಕ್ಷ ವೈ. ದ್ಯಾವಪ್ಪ ರೆಡ್ಡಿ, ರೈತ ಒಕ್ಕೂಟದ ಶಾಮನೂರು ಲಿಂಗರಾಜ್, ಎಪಿಎಂಸಿ ಮಾಜಿ ಅಧ್ಯಕ್ಷರಾದ ನಾಗೇಶ್ವರರಾವ್, ಜಿ. ಮಂಜುನಾಥ್ ಪಟೇಲ್ ನೇತೃತ್ವದ ರೈತರ ನಿಯೋಗವೂ ಸೊರಬದಲ್ಲಿ ಸಚಿವ ಮಧು ಬಂಗಾರಪ್ಪ ಅವರನ್ನು ಭೇಟಿ ಮಾಡಿ, ನಾಲೆಯಲ್ಲಿ ನೀರು ನಿಲ್ಲಿಸದಂತೆ ಮನವಿ ಮಾಡಿ ಬಂದಿದ್ದರು.

ಈ ಎಲ್ಲಾ ಒತ್ತಡಗಳ ನಡುವೆಯೂ ಭದ್ರಾ ಕಾಡಾ ಅಧ್ಯಕ್ಷರೂ ಆದ ಶಿವಮೊಗ್ಗ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರ ಸೂಚನೆ ಮೇರೆಗೆ ಈ ಹಿಂದಿನ ವೇಳಾಪಟ್ಟಿ ಪ್ರಕಾರ ಮಂಗಳವಾರ ಸಂಜೆ 6 ಗಂಟೆಯಿಂದ ಬಲದಂಡೆ ನಾಲೆಯಲ್ಲಿ ನೀರು ಬಂದ್ ಮಾಡಲಾಗಿದೆ.

ಈ ತೀರ್ಮಾನದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಅಚ್ಚುಕಟ್ಟಿನ ದಾವಣಗೆರೆ ಜಿಲ್ಲೆಯ ಜನಪ್ರತಿನಿಧಿಗಳು ಮತ್ತು ರೈತರು ನಾಲೆಯಲ್ಲಿ ನೀರು ಮುಂದುವರೆಸುವಂತೆ ಆಗ್ರಹಿಸಿದ್ದಾರೆ.

ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಭದ್ರಾ ಬಲದಂಡೆ ನಾಲೆಯಲ್ಲಿ ನೀರು ಹರಿಸುವ ಬಗ್ಗೆ ತೀರ್ಮಾನ ಹೇಳುತ್ತೇನೆಂದು ಹೇಳಿ, ಇದುವರೆಗೂ ಯಾವ ತೀರ್ಮಾನ ಹೇಳದಿರುವ ಬಗ್ಗೆಯೂ ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ರೈತರು ಬೇಸರ ವ್ಯಕ್ತಪಡಿಸಿದ್ದಾರೆ.

**ಸೈಟ್ ಮಾರಾಟಕ್ಕೆ (KHB)**
ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ. ಕರ್ನಾಟಕ ಹೌಸಿಂಗ್ ಬೋರ್ಡ್ 120 ಅಡಿ ರಸ್ತೆಗೆ. 50X80 ಉತ್ತರ, 40X60 ಉತ್ತರ, 60 ಅಡಿ ರಸ್ತೆಗೆ 40X40 W+S ಕಾರ್ನರ್, 40X60 ದಕ್ಷಿಣ, 40X60 ಪೂರ್ವ. 38x40 ಉತ್ತರ.
ಕಿರಣ್ ಬೂಸನೂರ್ (ಏಜೆಂಟ್)
98440 63409

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ LIC ಕಾಲೋನಿಯಲ್ಲಿ 40x60 South, 30x40 West, 15x45 South.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಬೇಕಾಗಿದ್ದಾರೆ**
ಟೈಲರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. 8 ಸಾವಿರ ಸಂಬಳ. ಸಂಪರ್ಕಿಸಿ :
94484 42861

**9th, 10th Maths Tution ಮಾಡಲಾಗುತ್ತದೆ.**
1 ರಿಂದ 2ನೇ ತರಗತಿಯವರೆಗೆ ಕನ್ನಡ ಟ್ಯೂಷನ್ ಮಾಡಲಾಗುತ್ತದೆ. ಚಿಕ್ಕಮಕ್ಕಳಿಗೆ ಮತ್ತು ಮಹಿಳೆಯರಿಗೆ ದೇವರನಾಮ, ಲಲಿತ ಸಹಸ್ರನಾಮ ಹೇಳಿಕೊಡಲಾಗುತ್ತದೆ.
97387 65628, 90351 06163

**ಮಹಿಳಾ ಮದುವೆ ಬ್ರೋಕರ್ ಬೇಕಾಗಿದ್ದಾರೆ**
ವಯಸ್ಸು 30, ಎತ್ತರ 5.7, ಬಿಎ., ಬಿಎಡ್., ಖಾಸಗಿ ಶಾಲೆಯಲ್ಲಿ ಶಿಕ್ಷಕರಾಗಿದ್ದು, ಜಮೀನು, ವ್ಯವಹಾರ ಮಾಡುತ್ತಿರುವ ವರನಿಗೆ ಸುಂದರವಾದ ವಧು ಬೇಕು. ಮಹಿಳಾ ಮದುವೆ ಬ್ರೋಕರ್ಸ್
ಸಂಪರ್ಕಿಸಿ : 99456 82243

**EC / ಇಸಿ, E-swathu, Khatha Change Building Licence & Property Documents, Loans-All banks**
96118-66449

**ಬಾಡಿಗೆ / ಲೀಸ್‌ಗೆ ಮನೆ ದೊರೆಯುತ್ತವೆ ವಿಚಾರಿಸಿ**
ವಿದ್ಯಾನಗರದಲ್ಲಿ ಎರಡು ಬೆಡ್ ರೂಮ್ 12 ಲಕ್ಷಕ್ಕೆ ಲೀಸ್‌ಗೆ, ಮೂರು ಬೆಡ್ ರೂಮ್ ಇಂಡಿಪೆಂಡೆಂಟ್ ಹೌಸ್ 40x60 ರಲ್ಲಿ ಬಾಡಿಗೆಗೆ.
ದಕ್ಷಿತ್ ಐನಳ್ಳಿ ಏಜೆಂಟ್
77955 06795

**ಸೈಟುಗಳು ಮಾರಾಟಕ್ಕಿವೆ**
ಯರಗುಂಟೆ ಸರ್ವೆ ನಂ. ಹೊಂದಿರುವ ಸವಣೂರು ಪ್ಲಾಜಾ ಹಿಂಭಾಗದಲ್ಲಿ ( ಹಳೆ ಪಿ.ಬಿ. ರಸ್ತೆ) 30x35 ಅಳತೆಯ ಎರಡು ಸೈಟ್ ಮಾರಾಟಕ್ಕಿವೆ. ಒಂದು ಸೈಟ್ ಬೆಲೆ 18 ಲಕ್ಷ. ಆಸಕ್ತರು ಕರೆ ಮಾಡಿ
94815 38996, 96323 16020

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಪಾರ್ಸೆಲ್ ಕಟ್ಟಲು ಹಾಗೂ ಇಡ್ಲಿ, ವಡ, ಬಜ್ಜಿ ಭಟ್ಟರು ಬೇಕಾಗಿದ್ದಾರೆ. ಸಮಯ ಬೆಳಿಗ್ಗೆ 7 ರಿಂದ ಸಂಜೆ 5:30ವರೆಗೆ.
97439 03282

**ತಕ್ಷಣ ಸಂಪರ್ಕಿಸಿರಿ**
ಪುರುಷ ನುರಿತ ಸೆಕ್ಯೂರಿಟಿ ಗಾರ್ಡ್ ಹೌಸ್ ಕೀಪಿಂಗ್, ಬೇಕಾಗಿದ್ದಾರೆ. ಸಂಪರ್ಕಿಸಿ : ESI & PF ಮತ್ತು ಊಟ, ವಸತಿ ಸೌಲಭ್ಯ ಇರುತ್ತದೆ.
72044 00262, 88844 99983

**ಬೇಕಾಗಿದ್ದಾರೆ**
Parcel Delivery Boy ಬೇಕಾಗಿದ್ದಾರೆ (ದ್ವಿ ಚಕ್ರ ವಾಹನ ಹೊಂದಿರಬೇಕು) ಸಂಪರ್ಕಿಸಿ :
88808 89806

**HOTEL SUPPLY**
Hotel ನಲ್ಲಿ SUPPLY ಮಾಡಲು, ಅನುಭವ ಇದ್ದವರು ಬೇಕಾಗಿದ್ದಾರೆ.
Call : 81475 47421

**ತಕ್ಷಣ ಬೇಕಾಗಿದ್ದಾರೆ**
ಎಲೆಕ್ಟ್ರಾನಿಕ್ ಸರ್ವೀಸ್ ಸೆಂಟರ್‌ನಲ್ಲಿ ಕೆಲಸ ಮಾಡಲು ಹರಿಹರದಲ್ಲಿರುವ ಹುಡುಗರು ಬೇಕಾಗಿದ್ದಾರೆ. PUC, ITI, Diploma ಆಗಿರುವ, 2 Wheeler Mandatory
94822 57570

**JOB OPPORTUNITY**
Female Office Assistant
Good In Office Work-Computer Skills Good In Customer Dealing Freshers can also apply B.Com., M.Com., & MBA
For Contact : 97312 18567
Send C.V-hardsoftdvg@gmail.com

**ಸೈಟುಗಳು ಮಾರಾಟಕ್ಕಿವೆ**
ಬಸವೇಶ್ವರ 50x40, 30x50, 30x50, ನಂದಿನಿ ಲೇಔಟ್ 30x40, 30x40, 30x40, ಎಸ್.ಎಸ್.ಲೇಔಟ್ 30x50, 30x40, ಚಿಗಟೇರಿ 30x40, 30x40, ಸರಸ್ವತಿ ನಗರ 30x50, 30x50, ಜಯನಗರ 30x40, 30x40, ಭೂಮಿಕಾ ನಗರ 50x40, 30x40
ಪ್ರಶಾಂತ್ 99726 70257

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು / ಹುಡುಗಿಯರು ಬೇಕಾಗಿದ್ದಾರೆ. ಪಿಯುಸಿ ಅಥವಾ ಯಾವುದೇ ಪದವಿ ಆಗಿರಬೇಕು.
ಕಾವೇರಿ ಮೆಡಿಹೌಸ್ ಪ್ರೈ.ಲಿ., ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 2.

**WANTED**
Office staff female =4 nos (smart looking and good communication skill and compute knowledge, language knowns kannada, hindi, English, marathi )good salary +incentive more details contact :
80505 10329 WhatsApp
7259782546
send the photo's and BIODATA

**ಬೇಕಾಗಿದ್ದಾರೆ**
ಆಡಿಟರ್ ಆಫೀಸ್‌ನಲ್ಲಿ ಕೆಲಸ ಮಾಡಲು ಆಫೀಸ್ ಬಾಯ್ ಬೇಕಾಗಿದ್ದಾರೆ. ಸಂಪರ್ಕಿಸಿ:
ಬಿ.ಜಿ. ಬಸವರಾಜಪ್ಪ
SJJM ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ. ಸಮಯ : 1 ರಿಂದ 5ರ ವರೆಗೆ
99001 42052

**ಮನೆ ಬಾಡಿಗೆಗೆ, ಲೀಸ್‌ಗೆ ಇದೆ**
(ಇಂಡಿಪೆಂಡೆಂಟ್) ಎಸ್.ಎಸ್. ಹೈಟೆಕ್ ಬಡಾವಣೆ 2 ಬೆಡ್ ರೂಂ (30x50) ಹೊಸ ಮನೆ ಶಿವಕುಮಾರಸ್ವಾಮಿ ಬಡಾವಣೆ, 3 ಬೆಡ್ ರೂಮ್ ಲೀಸ್ / ಬಾಡಿಗೆ (ಪಶ್ಚಿಮ). ಏಜೆಂಟ್
73532 55225

**ಸ್ವಾಮಿ ಅಯ್ಯಪ್ಪ ಟ್ರಾವೆಲ್ಸ್**
ದಕ್ಷಿಣ ಭಾರತದ 8 ದಿನಗಳ ಸುಖಕರ ಪ್ರವಾಸ, ಶಿವಕಂಚಿ, ವಿಷ್ಣುಕಂಚಿ, ಮಹಾಬಲಿಪುರ, ಪಾಂಡಿಚೇರಿ ಕುಂಭಕೋಣಂ, ಚಿದಂಬರಂ, ತಂಜಾವೂರು, ಶ್ರೀರಂಗಂ, ರಾಮೇಶ್ವರ, ಕನ್ಯಾಕುಮಾರಿ, ಮಧುರೈ, ತ್ರಿಪುರಾಕೋದ್ರಂ, ಪಳನಿ, ಮೈಸೂರು ತಿರುಚಂದೂರು ದಿನಾಂಕ : 26.10.2023ರ ಗುರುವಾರ ರಾತ್ರಿ 10 ಗಂಟೆಗೆ ಬಕ್ಕೇಶ್ವರ ಶಾಲೆ ಹತ್ತಿರ, ಸ್ವಾಮಿ ಅಯ್ಯಪ್ಪ ದೇವಸ್ಥಾನದಿಂದ ಹೊರಡುವುದು.
94485 33928, 99800 32271

**ಉಷಾ ಟ್ರೇಡಿಂಗ್ ಕಂಪನಿ**

ಅಧಿಕೃತ ಮಾರಾಟಗಾರರು
ಡರ್ಬಿ ಹೊಲಿಗೆ ಯಂತ್ರಗಳು ಮತ್ತು ಬಿಡಿ ಭಾಗಗಳು. ಮಂಡಿಪೇಟೆ, ಗೂಡ್ ಶೆಡ್ ರಸ್ತೆ, ದಾವಣಗೆರೆ-1. ಎಲ್ಲಾ ಕಂಪನಿಗಳ ಹೊಲಿಗೆ ಯಂತ್ರಗಳ ಮಾರಾಟ ಹಾಗೂ ರಿಪೇರಿ ಮಾಡಲಾಗುವುದು.
94484 49617, 94805 00808

**ಪಿ.ಯು.ಸಿ ಆದವರು ಬೇಕಾಗಿದ್ದಾರೆ**
ಗೃಹ ಉಪಕರಣಗಳ ದುರಸ್ತಿ ಮೆಕ್ಯಾನಿಕ್ ಮತ್ತು ಡೆಲಿವರಿಗಾಗಿ ಹುಡುಗರು ಬೇಕಾಗಿದ್ದಾರೆ. ಟು ವ್ಹೀಲರ್ ಇದ್ದವರಿಗೆ ಆದ್ಯತೆ. ಆಸಕ್ತರು ಸಂಪರ್ಕಿಸಿ :
94817 74321

**ಮಳಿಗೆ ಬಾಡಿಗೆಗೆ ಇದೆ**
(ಹದಡಿ ರಸ್ತೆ, ತರಳಬಾಳು ಬಡಾವಣೆ) ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತದ ಎದುರು, ನಮ್ಮೂರು ತಿಂಡಿ ಹೋಟೆಲ್ ಎದುರು, 2050 ಚ.ಅ.
96863 96992

**ಕೆಲಸಕ್ಕೆ ಬೇಕಾಗಿದ್ದಾರೆ**
ಚಿಟ್ ಫಂಡ್ ಸಂಸ್ಥೆಯಲ್ಲಿ ಅನುಭವವುಳ್ಳವರು ಕಲೆಕ್ಷನ್ ಬಾಯ್ , ಅಕೌಂಟೆಂಟ್
80503 22279
78478 40368

**ಕ್ಲೀನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ**
ಅನುಭವವಿರುವ ಮಹಿಳೆಯರು / ಪುರುಷರು ಬೇಕಾಗಿದ್ದಾರೆ. ಸಂಪರ್ಕಿಸುವ ಸಮಯ : ಬೆಳಿಗ್ಗೆ 11.30 ರಿಂದ ಸಂಜೆ 5ರವರೆಗೆ.
08192 254736

**WANTED**
1) Front Office Excutive
2) Lab - Technologist
3) Marketing Excutive
Contact : Mithra Diagnostic Laboratory, Behind Vishwesh-waraiah Park, Davangere.
9844326560

**ಬೇಕಾಗಿದ್ದಾರೆ**
ಕಂಪ್ಯೂಟರ್ ಕೆಲಸಕ್ಕೆ ಲೇಡೀಸ್ ಬೇಕಾಗಿದ್ದಾರೆ. ಸಂಪರ್ಕಿಸಿ :
94838 62779

**WANTED**
ACCOUNTS EXECUTIVES
02 Post (4 years Experience)
HR OFFICER
1 Post (5 years Experience)
SHAMANUR SUGARS LTD., #347, P.J. Extension, 4th main, Davangere.
98441 20003

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**OFFICE SPACE FOR RENT**
Finance, Mini Bank, Co-op. Bank, ETC with wash room facility N.R. Road, Davangere.
94483 69523

**ಬೇಕಾಗಿದ್ದಾರೆ**
ಅನುಭವವುಳ್ಳ ಯುವತಿಯರು ಬಟ್ಟೆ ಅಂಗಡಿ ಕೆಲಸಕ್ಕೆ ಜಾಕಿ ಶೋ ರೂಮ್‌ಗೆ ಬೇಕಾಗಿದ್ದಾರೆ. ದರ್ಶನ್ ಆರ್ಕೇಡ್ ಡೆಂಟಲ್ ಕಾಲೇಜ್ ರೋಡ್, ದಾವಣಗೆರೆ. ಸಂಪರ್ಕಿಸಿ :
08192 224842
ಸಮಯ : 11Am to 6 Pm ಬರುವಾಗ ದಯವಿಟ್ಟು ಫೋಟೋ, ಬಯೋಡೇಟಾ ತನ್ನಿ.

**ಸೈಟ್ ಮಾರಾಟಕ್ಕಿದೆ**
ಪಿ.ಬಿ. ರೋಡ್, Hyundai Car Showroom ಹಿಂಭಾಗ ಬಸವನಗೌಡ ಬಡಾವಣೆ, ಆವರಗೆರೆ. 30x46 ಉತ್ತರ, 30x46 ದಕ್ಷಿಣ Rs. 2000/- per sq ft. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
ACHARYA REALTORS
826 826 7878

**ಬೇಕಾಗಿದ್ದಾರೆ**
ಹೋಲ್ ಸೇಲ್ ಫಾರ್ಮದಲ್ಲಿ ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ, ಆಕರ್ಷಕ ಸಂಬಳ ನೀಡಲಾಗುವುದು. ಎ.ಕೆ. ಸೇಲ್ಸ್, # 482/1-4, 1 ನೇ ಫ್ಲೋರ್, ಡಾ. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, 4ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ. ಸಂಪರ್ಕಿಸಿ :
76249 99323

**REQUIRED**
Fresh graduates (B.E, MCA, BCA) required for an IT company.
3 months training will be given.
Send resumes to: shajmathews@gmail.com

**ಸೆಲ್ಲರ್ ಬಾಡಿಗೆಗೆ ಇದೆ**
ದಾವಣಗೆರೆ ಹದಡಿ ರಸ್ತೆಯಲ್ಲಿ, ಲಕ್ಷ್ಮಿ ವೆಂಕಟೇಶ್ವರ ಗ್ರಾನೈಟ್ಸ್ ಎದುರು, ಕಮರ್ಷಿಯಲ್ ಉದ್ದೇಶದ ಸೆಲ್ಲರ್ 2500 ಚ.ಅಡಿ, ಹೊಸ ಕಟ್ಟಡ ಬಾಡಿಗೆಗಿದೆ.
94483 39406

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2&3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಶಿಕ್ಷಕರು ಬೇಕಾಗಿದ್ದಾರೆ**
ಲಯನ್ಸ್ ಆಂಗ್ಲ ಮಾಧ್ಯಮ ಶಾಲೆ, ದೇವರಾಜ ಅರಸು ಬಡಾವಣೆಯಲ್ಲಿ ಪ್ರಾಥಮಿಕ ಹಂತದಲ್ಲಿ ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸಲು ನುರಿತ ಡಿಗ್ರಿ ಹೊಂದಿದಂತಹ ಶಿಕ್ಷಕರು ಮತ್ತು ದೈಹಿಕ ಶಿಕ್ಷಕರು ಹಾಗೂ ಶಾಲೆಯಲ್ಲಿ ಆಯಾ ಕೆಲಸ ಮಾಡಲು ಆಯಾಗಳು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. ಸಂಪರ್ಕಿಸಿ :
94836 19815
99017 06066

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 94481 59303, 80509 52637

**CLASSES**
Basic Computers, Handwriting, Spoken English, Maths Skills and General Knowldege, For 4th to 10th Std, MCC `A' Block.
98444 92888

**ಸೈಟುಗಳು ಮಾರಾಟಕ್ಕಿವೆ**
ಕುಂದುವಾಡ ರಸ್ತೆ, ಶಿವಗಂಗಾ ಚೌಟ್ರಿ ಹಿಂಭಾಗ 40 ಅಡಿ ರಸ್ತೆಗೆ, 40x60, 40x60, ಪೂರ್ವಕ್ಕೆ, 60x83 ದಕ್ಷಿಣ, ಅಮರನಾಥ್ ಲೇಔಟ್‌ನಲ್ಲಿ 28x50 ಪೂರ್ವಕ್ಕೆ, ಗ್ಲಾಸ್ ಹೌಸ್ NMK ಲೇಔಟ್‌ನ ಪಕ್ಕದಲ್ಲಿ 30x40 ಪಶ್ಚಿಮ.
ಬಸವರಾಜ N
98440 84229

**4BHK ಮನೆ ಬಾಡಿಗೆಗೆ ಇದೆ**
(ಕಮರ್ಷಿಯಲ್ ಪರ್ಪೋಸ್) ಎಂ.ಸಿ.ಸಿ. 'ಎ' ಬ್ಲಾಕ್‌ನ ಮುಖ್ಯ ಸತ್ಸಂಗ ರಸ್ತೆಯಲ್ಲಿ (ತೋಗಟವೀರ ಕಲ್ಯಾಣ ಮಂಟಪ ರೋಡ್) ನವೀಕರಿಸಲಾದ ಮನೆ ವಾಣಿಜ್ಯ ಉದ್ದೇಶಕ್ಕಾಗಿ (Office, Agency, Pharmacy, Poly Clinic, Co-Operative Society) ಬಾಡಿಗೆಗೆ ಇದೆ. ಸಂಪರ್ಕಿಸಿ. :
98868 17252

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**AVOID MOSQUITOES**
Mosquito Net For Doors & Windowes.
SRI GOWRI ENTERPRISES
# 7C2, 4th Cross, Near Shanesh-wara Temple, Karur Industrial Area, P.B. Road, Davangere-6
72049 94628

# ತ್ರಿವಳಿ ಹತ್ಯೆ ಮಾಡಿ ತಾನೇ ಸತ್ತಿರುವುದಾಗಿ ಸೋಗು

ನವದೆಹಲಿ, ಅ. 17 – ತ್ರಿವಳಿ ಹತ್ಯೆ ಮಾಡಿದ ನಂತರ, ತಾನೇ ಸತ್ತಿರುವುದಾಗಿ ಸೋಗು ಹಾಕಿ 20 ವರ್ಷಗಳಿಂದ ವಂಚಿಸುತ್ತಿದ್ದ ನೌಕಾ ದಳದ ಮಾಜಿ ಉದ್ಯೋಗಿಯೋರ್ವನನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ.

ಬಾಲೇಶ್ ಕುಮಾರ್ ಎಂಬಾತ ತನ್ನ ಸಂಬಂಧಿಯೋರ್ವನನ್ನು ಹತ್ಯೆಗೈದಿದ್ದ ಹಾಗೂ ಇಬ್ಬರು ಕಾರ್ಮಿಕರನ್ನು ಸುಟ್ಟು ಹತ್ಯೆಗೈದಿದ್ದ. ನಂತರ ತನ್ನ ಹೆಸರನ್ನು ಅಮನ್ ಸಿಂಗ್ ಎಂದು ಬದಲಿಸಿಕೊಂಡು ದೆಹಲಿಯ ನಜಾಫ್‌ಘರ್‌ನಲ್ಲಿ ಕುಟುಂಬದ ಜೊತೆ ನೆಲೆಸಿದ್ದ.

**20 ವರ್ಷಗಳ ನಂತರ ನೌಕಾ ದಳದ ಮಾಜಿ ಉದ್ಯೋಗಿ ಬಂಧನ**

ಬಾಲೇಶ್‌ಗೆ 40 ವರ್ಷವಾಗಿದ್ದಾಗ ಸಂಬಂಧಿ ರಾಜೇಶ್ ಎಂಬುವವರನ್ನು ದೆಹಲಿಯಲ್ಲಿ ಹತ್ಯೆ ಮಾಡಿದ್ದ. ಹಣಕಾಸು ವಿವಾದಕ್ಕೆ ಸಂಬಂಧಿಸಿದಂತೆ ಈ ಹತ್ಯೆ ನಡೆಸಲಾಗಿತ್ತು. ಅಲ್ಲದೇ, ರಾಜೇಶ್ ಪತ್ನಿ ಜೊತೆ ಬಾಲೇಶ್ ಅಕ್ರಮ ಸಂಬಂಧ ಹೊಂದಿದ್ದ ಎಂದು ಆರೋಪಿಸಲಾಗಿತ್ತು.

2004ರಲ್ಲಿ ನಡೆದ ಈ ಕೃತ್ಯದಲ್ಲಿ ಬಾಲೇಶ್ ಜೊತೆ ಕೈ ಜೋಡಿಸಿದ್ದ ಸಹೋದರ ಸುಂದರ್ ಲಾಲ್ ಎಂಬಾತನನ್ನು ಪೊಲೀಸರು ಬಂಧಿಸಿದ್ದರು. ಆದರೆ, ಬಾಲೇಶ್ ತಪ್ಪಿಸಿಕೊಂಡಿದ್ದ.

ಮೊದಲು ನೌಕಾ ದಳದಲ್ಲಿದ್ದ ಬಾಲೇಶ್, ನಂತರ ನಿವೃತ್ತಿ ಪಡೆದು ಸರಕು ಸಾಗಣೆ ವ್ಯವಹಾರ ಆರಂಭಿಸಿದ್ದ. ತನ್ನ ಲಾರಿಯೊಂದರಲ್ಲಿ ಬಿಹಾರದ ಇಬ್ಬರು ಕಾರ್ಮಿಕರೊಂದಿಗೆ ರಾಜಸ್ಥಾನಕ್ಕೆ ತಪ್ಪಿಸಿಕೊಂಡು ಹೋಗಿದ್ದ ಬಾಲೇಶ್, ಅಲ್ಲಿ ಲಾರಿಗೆ ಬೆಂಕಿ ಹಚ್ಚಿ ಕಾರ್ಮಿಕರನ್ನು ಸಜೀವ ದಹನಕ್ಕೆ ಗುರಿ ಮಾಡಿದ್ದ.

ಮೃತದೇಹಗಳು ಸುಟ್ಟು ಕರಕಲಾಗಿ ಗುರುತು ಸಿಗದಂತಾಗಿದ್ದವು. ಈ ಪ್ರಕರಣದ ತನಿಖೆ ಮಾಡಿದ್ದ ರಾಜಸ್ಥಾನದ ಪೊಲೀಸರು, ಮೃತರಲ್ಲಿ ಓರ್ವ ಬಾಲೇಶ್ ಎಂದು ಹೇಳಿದ್ದರು. ಕುಟುಂಬದವರೂ ಸಹ ಮೃತದೇಹಗಳಲ್ಲಿ ಒಂದು ಬಾಲೇಶ್‌ನದ್ದು ಎಂದು ಹೇಳಿದ್ದರು.

ಪ್ರಕರಣದ ಪ್ರಮುಖ ಆರೋಪಿಯೇ ಮೃತಪಟ್ಟಿದ್ದಾನೆ ಎಂದು ಪೊಲೀಸರು ಪ್ರಕರಣಕ್ಕೆ ತೆರೆ ಎಳೆದಿದ್ದರು. ಸ್ವಂತ ಸಾವಿನ ಸೋಗು ಹಾಕಿದ್ದ ಬಾಲೇಶ್, ನಂತರ ಪಂಜಾಬ್‌ಗೆ ತೆರಳಿದ್ದ. ಅಲ್ಲಿ ಫೋರ್ಜರಿ ದಾಖಲೆಗಳೊಂದಿಗೆ ಅಮನ್ ಸಿಂಗ್ ಎಂಬ ಹೊಸ ಹೆಸರಿಟ್ಟುಕೊಂಡಿದ್ದ. ನಂತರ ಪತ್ನಿ ಸಂಪರ್ಕ ಬೆಳೆಸಿ, ತನ್ನ ಹೆಸರಿನಲ್ಲಿದ್ದ ವಿಮೆ ಹಣ ಆಕೆಗೆ ಸಿಗುವಂತೆ ಮಾಡಿದ್ದ. ನೌಕಾ ದಳದ ಪಿಂಚಣಿ ಸಹ ಪತ್ನಿ ಪಡೆಯಲು ಆರಂಭಿಸಿದಳು. ನಂತರ ಬಾಲೇಶ್ ದೆಹಲಿಯ ನಜಾಫ್‌ಘಡ್‌ಗೆ ತೆರಳಿ, ಕುಟುಂಬದವರನ್ನು ಅಲ್ಲಿಗೇ ಕರೆಸಿಕೊಂಡು ಜೊತೆಯಾಗಿ ಬದುಕುತ್ತಿದ್ದ.

ಈತನ ಬಗ್ಗೆ ಗುಪ್ತ ಮಾಹಿತಿಯೊಂದನ್ನು ಪಡೆದ ಪೊಲೀಸರು, ಸೋಮವಾರ ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ಆಗ ಆತನ ಇಡೀ ಕೃತ್ಯ ಬಯಲಾಗಿದೆ. ಬಾಲೇಶ್ ಹಾಗೂ ಕುಟುಂಬದ ಇತರ ಸದಸ್ಯರ ವಿರುದ್ಧ ಈಗ ಪ್ರಕರಣ ದಾಖಲಿಸಲಾಗಿದೆ.

## ನಗರದಲ್ಲಿ ಇಂದಿನಿಂದ ನೀರು ಸರಬರಾಜಿನಲ್ಲಿ ವ್ಯತ್ಯಯ

ಮಹಾನಗರ ಪಾಲಿಕೆಯ ನೀರು ಸರಬರಾಜು ಕೇಂದ್ರವಾದ ರಾಜನಹಳ್ಳಿ ಪಂಪ್ ಮನೆಯಿಂದ ಬರುವ ಪೈಪ್ ಹರಗನಹಳ್ಳಿ ಕ್ರಾಸ್ ಹತ್ತಿರ ಪೈಪ್ ಲೀಕೇಜ್ ರಿಪೇರಿ ಕಾರ್ಯ ಇರುವುದರಿಂದ ನಗರದಲ್ಲಿ ಇಂದಿನಿಂದ ಎರಡು ದಿನ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ಅವರು ತಿಳಿಸಿದ್ದಾರೆ.

## ರಾಜ್ಯ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆ

ದಾವಣಗೆರೆ ಅ. 17 - 2022-23ನೇ ಸಾಲಿನ ರಾಜ್ಯ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ತುಮಕೂರು ಜಿಲ್ಲಾ ಕ್ರೀಡಾಂಗಣದಲ್ಲಿ ಇದೇ ದಿನಾಂಕ 27 ರಿಂದ 29 ರವರೆಗೆ ಆಯೋಜಿಸಲಾಗಿದೆ.

ಜಿಲ್ಲಾ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ವೈಯಕ್ತಿಕ ಸ್ಪರ್ಧೆಗಳಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದವರು ಮತ್ತು ಗುಂಪು ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದು, ಈಗಾಗಲೇ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಂಡ ಕ್ರೀಡಾಪಟುಗಳು ರಾಜ್ಯ ಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟದಲ್ಲಿ ಭಾಗವಹಿಸಲು ಅರ್ಹರಿರುತ್ತಾರೆ. ಅರ್ಹ ಕ್ರೀಡಾಪಟುಗಳು ಇದೇ ದಿನಾಂಕ 27 ರಂದು ಬೆಳಿಗ್ಗೆ 9 ಗಂಟೆಯೊಳಗಾಗಿ ತುಮಕೂರು ಜಿಲ್ಲಾ ಕ್ರೀಡಾಂಗಣದಲ್ಲಿ ವರದಿ ಮಾಡಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ದಾವಣಗೆರೆ ಇಲ್ಲಿ ಅಥವಾ ದೂ. ಸಂ. 08192-237480 ಗೆ ಸಂಪರ್ಕಿಸಲು ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ವೀರೇಶ್ ಎಸ್. ಒಡೇನಪುರ ತಿಳಿಸಿದ್ದಾರೆ.

## ನಗರದಲ್ಲಿ ನಾಳೆ ವಿಶೇಷ ತರಬೇತಿ

ದಾವಣಗೆರೆ, ಅ.17- ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಬೆಂಗಳೂರು, ಸಹಕಾರ ಇಲಾಖೆ ದಾವಣಗೆರೆ ಹಾಗೂ ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ ಇವರುಗಳ ಸಂಯುಕ್ತಾಶ್ರಯದಲ್ಲಿ ನಾಡಿದ್ದು ದಿನಾಂಕ 19ರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ಜಿಲ್ಲೆಯ ಪತ್ತಿನ ಸಹಕಾರ ಸಂಘಗಳು, ನೌಕರರ ಪತ್ತಿನ ಸಹಕಾರ ಸಂಘಗಳು ಹಾಗೂ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳ ಅಧ್ಯಕ್ಷರು, ವ್ಯವಸ್ಥಾಪಕರು, ಕಾರ್ಯದರ್ಶಿಗಳಿಗೆ ಒಂದು ದಿನದ ವಿಶೇಷ ತರಬೇತಿ ಶಿಬಿರವನ್ನು ನಗರದ ಜನತಾ ಬಜಾರ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ದಾವಣಗೆರೆ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತದ ಅಧ್ಯಕ್ಷ ಸಿರಿಗೆರೆ ರಾಜಣ್ಣ ಅವರ ಅಧ್ಯಕ್ಷತೆಯಲ್ಲಿ ಜರಗುವ ಕಾರ್ಯಕ್ರಮವನ್ನು ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿರ್ದೇಶಕ, ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಡಾ. ಜಿ.ಆರ್. ಷಣ್ಮುಖಪ್ಪ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾ ಗಿ ಶೋಭಾ ಬಿ. ಉಮೇಶ ಕುಮಾರ್, ಬೇತೂರು ರಾಜಣ್ಣ, ಆರ್.ಜಿ. ಶ್ರೀನಿವಾಸಮೂರ್ತಿ, ಹೆಚ್. ಅನ್ನಪೂರ್ಣ, ಕೆ. ಮಹೇಶ್ವರಪ್ಪ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

## ನಾಳೆ ಆರುಷಿ ಯೋಜನೆಯ ಪಾದಯಾತ್ರೆ

ದಾವಣಗೆರೆ, ಅ. 17- ಹೆಣ್ಣು ಭ್ರೂಣ ಹತ್ಯೆ ನಿಯಂತ್ರಣ ಮತ್ತು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ 'ಆರುಷಿ' ಹೆಸರಿನಲ್ಲಿ ಯೋಜನೆಯನ್ನು ಸಿದ್ಧಪಡಿಸಿ, ಜಾರಿಗೆ ತರುವಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರವನ್ನು ಆಗ್ರಹಿಸಿ ಹಮ್ಮಿಕೊಂಡಿರುವ ಪಾದಯಾತ್ರೆ ನಾಡಿದ್ದು, ದಿನಾಂಕ 19 ರಂದು ನಗರಕ್ಕೆ ಆಗಮಿಸಲಿದೆ ಎಂದು ಆರುಷಿ ಯೋಜನೆಯ ಅಭಿಮಾನಿ ಬಳಗದ ಡಿ. ಮಂಜಾನಾಯ್ಕ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಆರುಷಿ ಯೋಜನೆಯನ್ನು ಜಾರಿಗೆ ತರುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿ, ಸೂಕ್ತ ವರದಿಯನ್ನು ಕೇಂದ್ರ ಸರ್ಕಾರಕ್ಕೆ ನೀಡುವಂತೆ ಒತ್ತಾಯಿಸಿ ಕನ್ಯಾಕುಮಾರಿಯಿಂದ ದೆಹಲಿಯವರೆಗೆ ಪಾದಯಾತ್ರೆ ಮಾಡುತ್ತಿದ್ದು, 19 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಸಂಗೊಳ್ಳಿ ರಾಯಣ್ಣ ವೃತ್ತದ ಮೂಲಕ ಹರಿಹರದ ಕಡೆ ಸಾಗಲಿದೆ ಎಂದರು.

ಈ ವೇಳೆ ಹೊನ್ನಾಳಿ ತಾಲ್ಲೂಕು ಸೇರಿದಂತೆ, ಜಿಲ್ಲೆಯ ಸರ್ವರೂ ಆಗಮಿಸಿ ಪಾದಯಾತ್ರೆಗೆ ಬೆಂಬಲಿಸಬೇಕು. ಜಿಲ್ಲೆಯ ಯುವ ಸಂಘಟನೆಗಳ ಎಲ್ಲಾ ಜನಪ್ರತಿನಿಧಿಗಳು, ಮಹಿಳಾ ಸಂಘಟನೆಗಳು ಮತ್ತು ವಿವಿಧ ಸಂಘಟನೆಗಳು ಪದಾಧಿಕಾರಿಗಳು, ಕಾರ್ಯಕರ್ತರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸುರೇಶ್ ನಾಯ್ಕ, ಹೆಚ್.ಎಸ್. ತೇಜಸ್ ಉಪಸ್ಥಿತರಿದ್ದರು.

# ನಗರಕ್ಕೆ ಇಂದು ರಾಜಯೋಗಿನಿ ಬ್ರಹ್ಮಾಕುಮಾರಿ ಆಶಾ ದೀದೀಜಿ

## 'ಒತ್ತಡ ಮುಕ್ತ ಆಡಳಿತ' ವಿಷಯ ಕುರಿತು ವಿಶೇಷ ಉಪನ್ಯಾಸ



ವಿಶ್ವ ಭ್ರಾತೃತ್ವದಲ್ಲಿ ತನ್ನದೇ ಆದ ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ದಾವಣಗೆರೆ ಸೇವಾ ಕೇಂದ್ರದಿಂದ 'ಒತ್ತಡ ಮುಕ್ತ ಆಡಳಿತ' ವಿಷಯ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಇಂದು ಹಮ್ಮಿಕೊಳ್ಳಲಾಗಿದೆ.

ಸಂಜೆ 6 ಗಂಟೆಗೆ ಸ್ಥಳೀಯ ಡಿ. ದೇವರಾಜ ಅರಸು ಬಡಾವಣೆ 'ಬಿ' ಬ್ಲಾಕ್‌ನಲ್ಲಿರುವ ಈಶ್ವರೀಯ ವಿಶ್ವವಿದ್ಯಾಲಯದ ಶಿವಧ್ಯಾನ ಮಂದಿರದಲ್ಲಿ ಈ ಕಾರ್ಯಕ್ರಮ ಏರ್ಪಾಡಾಗಿದೆ ಎಂದು ಸಂಸ್ಥೆಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ತಿಳಿಸಿದ್ದಾರೆ.

ಬ್ರಹ್ಮಾಕುಮಾರಿ ಸಂಸ್ಥೆಯ ಪ್ರಧಾನ ಕೇಂದ್ರ ಅಬು ಪರ್ವತದ ಆಡಳಿತ ಮಂಡಳಿ ಸದಸ್ಯರೂ, ದೆಹಲಿಯ ಓಂ ಶಾಂತಿ ರಿಟ್ರೀಟ್ ಸೆಂಟರ್ ಸಂಚಾಲಕರೂ, ಹಿರಿಯ ರಾಜಯೋಗಿನಿಯರೂ ಆಗಿರುವ ಬ್ರಹ್ಮಾಕುಮಾರಿ ಆಶಾ ದೀದೀಜಿ, 'ನಮ್ಮ ಕೆಲಸದಲ್ಲಿ ಒತ್ತಡ ಮುಕ್ತವಾಗಿ ಹೇಗೆ ಕಾರ್ಯ ನಿರ್ವಹಿಸಬೇಕು' ಎನ್ನುವ ವಿಷಯ ಕುರಿತಂತೆ ಉಪನ್ಯಾಸ ನೀಡಲಿದ್ದಾರೆ.

ಕಾರ್ಯಕ್ರಮದ ಉದ್ಘಾಟನೆಯನ್ನೂ ನೆರವೇರಿಸಲಿರುವ ಆಶಾ ದೀದೀಜಿ, ಇಂದು ಮಧ್ಯಾಹ್ನ ನಗರಕ್ಕೆ ಆಗಮಿಸಲಿದ್ದು, ಇಂದು ಮತ್ತು ನಾಳೆ ಎರಡು ದಿನ ಬ್ರಹ್ಮಾಕುಮಾರಿ ಸಂಸ್ಥೆಯಲ್ಲಿ ಆಯೋಜನೆಗೊಂಡಿರುವ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

**ಸಂಕ್ಷಿಪ್ತ ಪರಿಚಯ :** ಮೂಲತಃ ಕರ್ನಾಟಕದವರಾದ ಆಶಾ ದೀದೀಜಿ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಸಮಾಜಶಾಸ್ತ್ರದಲ್ಲಿ ಚಿನ್ನದ ಪದಕ ಪಡೆದಿದ್ದಾರೆ. ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದ ಅವರು, ಮುನುಕುಲದ ಸೇವೆ ಮತ್ತು ಮೌಲ್ಯಾಧಾರಿತ ಸಮಾಜ ನಿರ್ಮಾಣಕ್ಕೆ ತಮ್ಮ ಜೀವನವನ್ನು ಮುಡುಪಾಗಿಡುವ ನಿಟ್ಟಿನಲ್ಲಿ 1972ರಲ್ಲಿ ಬ್ರಹ್ಮಾಕುಮಾರೀಸ್ ಸಂಸ್ಥೆಗೆ ತಮ್ಮನ್ನು ತಾವು ಸಮರ್ಪಿಸಿಕೊಂಡು, ಸುಮಾರು 50 ವರ್ಷಗಳಿಂದ ವಿಶ್ವ ನವ ನಿರ್ಮಾಣ ಅರ್ಥಾತ್ ಪರಮಾತ್ಮನ ಸೇವೆಯಲ್ಲಿ ಅನುಪಮ ಸೇವೆ ಸಲ್ಲಿಸುತ್ತಿದ್ದಾರೆ.

ತಮ್ಮ 9ನೇ ವಯಸ್ಸಿನಿಂದಲೇ ಬ್ರಹ್ಮಾಕುಮಾರೀಸ್ ಸಂಸ್ಥೆಯ ಮೂಲಕ ಅಧ್ಯಾತ್ಮಿಕ ಜೀವನವನ್ನು ಅನುಸರಿಸು ತ್ತಿರುವ ಆಶಾ ದೀದೀಜಿ, ಇದೀಗ ; ಬ್ರಹ್ಮಾಕುಮಾರೀಸ್ ಸಂಸ್ಥೆಯ ಓರ್ವ ಹಿರಿಯ ಮುತ್ಸದ್ಧಿಗಳೂ, ಆಶಾವಾದಿಗಳೂ, ನಮ್ರಚಿತ್ತರೂ, ದೃಢತೆಯುಳ್ಳವರೂ, ಸಮರ್ಪಿತರೂ, ಮಂದಸ್ಮಿತರೂ, ಅಧ್ಯಾತ್ಮಿಕ ಚಿಂತಕರೂ, ಸುಪ್ರಸಿದ್ದ ವಾಗ್ಮಿಗಳೂ ಸಹ ಆಗಿದ್ದಾರೆ. ವರ್ತಮಾನದಲ್ಲಿ ದೆಹಲಿ ಹತ್ತಿರವಿರುವ ಓಂ ಶಾಂತಿ ರಿಟ್ರೀಟ್ ಸೆಂಟರ್‌ನ ಸಂಚಾಲಕರು ಮತ್ತು ಬ್ರಹ್ಮಾಕುಮಾರೀಸ್ ಸಂಸ್ಥೆಯ ಆಡಳಿತ ಮಂಡಳಿಯ ಪ್ರಮುಖ ಸದಸ್ಯರೂ ಆಗಿದ್ದಾರೆ.

ಆಯುಷ್ ಮಂತ್ರಾಲಯದ ಯೋಗ ತಜ್ಞರ ಸಮಿತಿಯಲ್ಲಿ ಆಶಾ ದೀದೀಜಿಯವರು ಬ್ರಹ್ಮಾಕುಮಾರೀಸ್ ಸಂಸ್ಥೆಯನ್ನು ಪ್ರತಿನಿಧಿಸುತ್ತಿದ್ದಾರೆ. ತನ್ಮೂಲಕ ದೇಶಾದ್ಯಂತ ವಿಶ್ವ ಯೋಗ ದಿನಾಚರಣೆಯನ್ನು ವ್ಯವಸ್ಥಿತ ಮತ್ತು ಪರಿಣಾಮಕಾರಿಯಾಗಿ ಆಯೋಜಿಸಲು ಸಹ ಭಾಗಿಗಳಾಗಿದ್ದಾರೆ.

ಆಶಾ ದೀದೀಜಿಯವರು ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಾಜೆಕ್ಟ್‌ಗಳನ್ನು ಪ್ರಸ್ತುತ ಪಡಿಸಿದ್ದಾರೆ. ಅವುಗಳಲ್ಲಿ ಪ್ರಮುಖವೆಂದರೆ ವಿಶ್ವಸಂಸ್ಥೆಯಲ್ಲಿ ಶಾಂತಿ-ಸಂಸ್ಕೃತಿಯ ವರ್ಷ-2000 ಅನ್ನು ಪ್ರಸ್ತುತಪಡಿಸಿದ್ದಾರೆ. ಉತ್ತಮ ವಿಶ್ವದ ನಿರ್ಮಾಣಕ್ಕಾಗಿ ಸರ್ವರ ಸಹಯೋಗ - 1998ರಲ್ಲಿ ವಿಶ್ವಸಂಸ್ಥೆಯ ಪ್ರಾಜೆಕ್ಟನ್ನು ಪ್ರಸ್ತುತಪಡಿಸಿದ್ದಾರೆ. ಮಿಲಿಯನ್ ಮಿನಿಟ್ಸ್ ಆಫ್ ಪೀಸ್ - ವಿಶ್ವಸಂಸ್ಥೆಯ ಪ್ರಾಜೆಕ್ಟನ್ನು ಪ್ರಸ್ತುತಪಡಿಸಿದ್ದಾರೆ.

ಅಧ್ಯಾತ್ಮಿಕ ಚಿಂತಕರಾಗಿ ಆಶಾ ದೀದೀಜಿಯವರು ಅನೇಕ ಮಂತ್ರಿಗಳಿಗೆ, ರಾಜ್ಯಪಾಲರಿಗೆ, ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರುಗಳಿಗೆ, ರಾಯಭಾರಿ ಕಚೇರಿಯ ಅಧಿಕಾರಿಗಳಿಗೆ, ಶಾಸಕರಿಗೆ ರಾಜಯೋಗ ಶಿಕ್ಷಣವನ್ನು ನೀಡುತ್ತಿದ್ದಾರೆ. ಐ.ಎ.ಎಸ್. ಅಧಿಕಾರಿಗಳು, ನಾಯಕರುಗಳು, ವ್ಯವಸ್ಥಾಪಕರು, ಕಾರ್ಯದರ್ಶಿಗಳಿಗೆ ಉತ್ತಮ ಆಡಳಿತವನ್ನು ನಡೆಸಲು ಅನೇಕ ತರಬೇತಿಗಳನ್ನು ರೂಪಿಸಿದ್ದಾರೆ.

ಉದಾಹರಣೆಗೆ ಒತ್ತಡ ನಿರ್ವಹಣೆ, ಮನಸ್ಸಿನ ನಿರ್ವಹಣೆ, ವಿಚಾರ-ನಿರ್ವಹಣೆ, ಅಹಂಕಾರ ಮತ್ತು ಕ್ರೋಧವನ್ನು ಜಯಿಸುವುದು, ಮೆಡಿಟೇಷನ್ ಇತರೆ.

ವಿಶ್ವದಾದ್ಯಂತ ಸಂಚರಿಸುತ್ತಾ ಶಾಂತಿ ಮತ್ತು ಅಧ್ಯಾತ್ಮಿಕತೆಯನ್ನು ಹರಡಿಸಲು ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ, ತಮ್ಮ ಪ್ರೇರಣಾದಾಯಕ ಮಾತುಗಳನ್ನು ನುಡಿದಿದ್ದಾರೆ. ಅನೇಕ ಸಂವಾದಗಳು, ರೇಡಿಯೋ ಮತ್ತು ಟಿ.ವಿ. ಕಾರ್ಯಕ್ರಮ, ಉಪನ್ಯಾಸವನ್ನೂ ನೀಡಿದ್ದಾರೆ. 'ಪೀಸ್ ಆಫ್ ಮೈಂಡ್' ಟಿ.ವಿ, 'ಸಂಸ್ಕಾರ' ಟಿ.ವಿ ಮತ್ತು 'ಅವೇಕನಿಂಗ್' ಟಿ.ವಿ.ಗಳಲ್ಲಿ ನಿರಂತರವಾಗಿ ತಮ್ಮ ಜ್ಞಾನಸುಧೆಯನ್ನು ಹರಿಸುತ್ತಿದ್ದಾರೆ.

ಬ್ರಹ್ಮಾಕುಮಾರೀಸ್ ಸಂಸ್ಥೆಯಲ್ಲಿರುವ ಅನೇಕ ಸೇವಾ ವಿಭಾಗಗಳ ಪೈಕಿ ಆಡಳಿತ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿರುವ ಆಶಾ ದೀದೀಜಿ, ಅನೇಕ ಕುಮಾರಿಯರಿಗೆ ಉತ್ತಮ ಬ್ರಹ್ಮಾಕುಮಾರಿ ಶಿಕ್ಷಕಿಯಾಗಲು ಅತ್ಯುತ್ತಮವಾದ ತರಬೇತಿಯನ್ನು ನೀಡುತ್ತಿದ್ದಾರೆ.

**ಉಪನ್ಯಾಸ :** ಇಂದು ಸಂಜೆ 6 ಗಂಟೆಗೆ ಶಿವಧ್ಯಾನ ಮಂದಿರದಲ್ಲಿ ನಡೆಯಲಿರುವ 'ಒತ್ತಡ ಮುಕ್ತ ಆಡಳಿತ' ಕಾರ್ಯಕ್ರಮವನ್ನು ಆಶಾ ದೀದೀಜಿ ನಡೆಸಿಕೊಡಲಿದ್ದಾರೆ.

ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ವಲಯ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜಋಷಿ ಸಾನ್ನಿಧ್ಯ ಮತ್ತು ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ವಲಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ನಿರ್ಮಲಾಜೀ ಅಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮ ಆಯೋಜನೆಗೊಂಡಿದೆ.

ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ಪೂರ್ವ ವಲಯ ಪೊಲೀಸ್ ಮಹಾನಿರೀಕ್ಷಕ ಡಾ. ಕೆ. ತ್ಯಾಗರಾಜನ್, ದಾವಣಗೆರೆ ವಿಶ್ವವಿದ್ಯಾಲಯದ ಉಪ ಕುಲಪತಿ ಪ್ರೊ. ಬಿ.ಡಿ. ಕುಂಬಾರ್, ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾದ ಅಥಣಿ ಎಸ್. ವೀರಣ್ಣ, ಜಿ.ಎಂ. ವಿಶ್ವವಿದ್ಯಾನಿಲಯದ ಡೀನ್ ಪ್ರೊ. ಜಿ.ಎಂ. ಪಾಟೀಲ್ ಅವರುಗಳು ಗೌರವಾನ್ವಿತ ಅತಿಥಿಗಳಾಗಿ ಭಾಗವಹಿಸುವರು.

# ರಾಜ್ಯ ಸರ್ಕಾರದ ದುರಾಡಳಿತ ಖಂಡಿಸಿ ಪ್ರತಿಭಟನೆ



**ಹರಪನಹಳ್ಳಿ**

ಹರಪನಹಳ್ಳಿ, ಅ.17- ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರದ ಆಡಳಿತ ನಡೆಸುತ್ತಿದ್ದು, ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜೀನಾಮೆ ನೀಡುವಂತೆ ಆಗ್ರಹಿಸಿ ತಾಲ್ಲೂಕು ಬಿಜೆಪಿ ಮಂಡಲದಿಂದ ಪ್ರತಿಭಟನೆ ನಡೆಸಿ ತಹಶೀಲ್ದಾರ್ ಗಿರೀಶ್‌ಬಾಬು ಅವರಿಗೆ ಮಂಗಳವಾರ ಮನವಿ ಪತ್ರ ಸಲ್ಲಿಸಿದರು.

ಪಟ್ಟಣದ ತಾಲ್ಲೂಕು ಆಡಳಿತ ಕಚೇರಿಗೆ ಆಗಮಿಸಿ ಭಾರತೀಯ ಜನತಾ ಪಾರ್ಟಿ ಮಂಡಲದ ಮುಖಂಡರು, ಕಾರ್ಯಕರ್ತರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು ಕೆಲವೇ ತಿಂಗಳುಗಳು ಆಗಿವೆ. ಸರ್ಕಾರದಲ್ಲಿ ಭ್ರಷ್ಟಾಚಾರ, ದಬ್ಬಾಳಿಕೆ, ಕಾನೂನು ಅವ್ಯವಸ್ಥೆ, ದುರಾಡಳಿತ ಅತಿಯಾಗಿ ರಾಜ್ಯದ ಜನತೆ ರೋಸಿ ಹೋಗಿದ್ದಾರೆ ಎಂದು ಆರೋಪಿಸಿದರು.

ಬೆಂಗಳೂರಿನಲ್ಲಿ ಇತ್ತೀಚೆಗೆ ಅಂಬಿಕಾಪತಿ ಎಂಬ ಗುತ್ತಿಗೆದಾರನ ಮನೆಯಲ್ಲಿ 42 ಕೋಟಿ ನಗದು ಹಣ ಐಟಿ ದಾಳಿಯಲ್ಲಿ ಸಿಕ್ಕಿದ್ದು ಎಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಈ ಹಣ ಕಮೀಷನ್ ರೂಪದಲ್ಲಿ ಬಂದಿರುವ ಹಣವಾಗಿದೆ ಎನ್ನುವುದು ದಟ್ಟವಾದ ಸುದ್ದಿಯಾಗಿದೆ. ಇದಲ್ಲದೆ ಸಾವಿರಾರು ಕೋಟಿ ಹಣ ಸಂಗ್ರಹ ಮಾಡಿ ಪಂಚರಾಜ್ಯ ಚುನಾವಣೆಯ ಕಾಂಗ್ರೆಸ್ ಖರ್ಚಿಗೆ ಕಲೆಕ್ಷನ್ ಮಾಡಲಾಗುತ್ತಿದೆ ಎಂಬ ವಿಷಯ ಭಾರೀ ಚರ್ಚೆಯಲ್ಲಿದೆ. ಕಾಂಗ್ರೆಸ್ ಪಾಲಿಗೆ ಕರ್ನಾಟಕ ಎಟಿಎಂ ಆಗಿದೆ ಹಾಗೂ ಕಮೀಷನ್ ಕೇಂದ್ರವಾಗಿದೆ ಎಂದು ದೂರಿದರು.

ರಾಜ್ಯದಲ್ಲಿ ಬರಕ್ಕೆ ತುತ್ತಾಗಿರುವ ರೈತರಿಗೆ ಪರಿಹಾರ ನೀಡಿಲ್ಲ, ವಿದ್ಯುತ್ ಕಡಿತ ವಿಪರೀತವಾಗಿದೆ, ವರ್ಗಾವಣೆ ದಂಧೆ ನಡೆಯುತ್ತಿದೆ. ತುಷ್ಟೀಕರಣದಲ್ಲಿ ಸರ್ಕಾರ ಮುಳುಗಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಕಾಂಗ್ರೆಸ್ ಎಟಿಎಂ ಸರ್ಕಾರದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡಲೇ ರಾಜಿನಾಮೆ ನೀಡುವಂತೆ ಭಾರತೀಯ ಜನತಾ ಪಾರ್ಟಿ ತಾಲ್ಲೂಕು ಮಂಡಲ ಒತ್ತಾಯಿಸಿದೆ.

ಈ ಸಂದರ್ಭದಲ್ಲಿ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಬಾಗಳಿ ಕೊಟ್ರೇಶಪ್ಪ, ಸಾರಿಗೆ ಮಾಜಿ ನಿರ್ದೇಶಕ ಆರುಂಡಿ ನಾಗರಾಜ, ಮಂಡಲ ಪ್ರಧಾನ ಕಾರ್ಯದರ್ಶಿ ಮುದುಕವ್ವನವರ ಶಂಕರ್, ಉದಯಕುಮಾರ್, ಯಲ್ಲಪ್ಪ, ಬಣಕಾರ ಜಗದೀಶ್, ಕುಸುಮಾ, ರೇಖಮ್ಮ, ಮಾರಪ್ಪ, ಜಟ್ಟೆಪ್ಪ ಸೇರಿದಂತೆ ಇತರರು ಇದ್ದರು.

# ಆಡಳಿತದಲ್ಲಿ ಕಾಂಗ್ರೆಸ್ ಸರ್ಕಾರ ವಿಫಲ : ಅಶ್ವತ್ಥ ನಾರಾಯಣ



ಬೆಂಗಳೂರು, ಅ.17- ರಾಜ್ಯದ ಕಾಂಗ್ರೆಸ್ ಸರ್ಕಾರ ಎಡವಟ್ಟುಗಳ ಸರ್ಕಾರವಾಗಿದ್ದು, ಆಡಳಿತ ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ರಾಜ್ಯದ ಮಾಜಿ ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥ್‌ನಾರಾಯಣ ಅವರು ಟೀಕಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಬಿಜೆಪಿ ವತಿಯಿಂದ ಇಂದು ನಡೆದ ಬೃಹತ್ ಪ್ರತಿಭಟನೆಯ ಸಂದರ್ಭದಲ್ಲಿ ಮಾತನಾಡಿದ ಅವರು, ಐಟಿ ದಾಳಿ ಸಂಬಂಧ ಸಿಬಿಐ ತನಿಖೆ ಮಾಡಿ ಹಣದ ಮೂಲವನ್ನು ಪತ್ತೆ ಮಾಡಬೇಕು ಎಂದು ಆಗ್ರಹಿಸಿದರು.

ನಾಚಿಕೆ ಇಲ್ಲದ ಸರ್ಕಾರವಿದು. ಪ್ರತಿಯೊಂದು ವಿಚಾರದಲ್ಲೂ ನಾಡಿಗೇ ಸಂಕಷ್ಟ ತಂದಿಟ್ಟ ಕಾಂಗ್ರೆಸ್ ಸರ್ಕಾರ ಇದು. ಈ ಸರ್ಕಾರ ತೊಲಗುವುದನ್ನೇ ಜನ ಬಯಸುತ್ತಿದ್ದಾರೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಸಂಪುಟದ ಸಚಿವರ ರಾಜೀನಾಮೆಗೆ ಅವರು ಆಗ್ರಹಿಸಿದರು.

ಸಾಕಷ್ಟು ಆಡಳಿತ ಅನುಭವ, ಪರಿಣತಿ ಇದ್ದರೂ, ಭಾರೀ ಬಹುಮತ ಸಿಕ್ಕಿದ್ದರೂ ಜನಾಶೀರ್ವಾದಕ್ಕೆ ತಕ್ಕ ಗೌರವವನ್ನು ನೀಡಿಲ್ಲ. ನಾಮಕಾವಸ್ತೆಗೆ ಕೆಲವು ಭಾಗ್ಯಗಳನ್ನು ತೋರಿಸಿ ಲೂಟಿ ಸರ್ಕಾರವನ್ನು ಕೊಟ್ಟಿದ್ದಾರೆ ಎಂದು ಆರೋಪಿಸಿದರು.

## ಚನ್ನಗಿರಿ : 19ರಂದು ರೈತರ ಸಮಸ್ಯೆಗಳು, ಪರಿಹಾರಗಳು ಸಂವಾದ ಕಾರ್ಯಕ್ರಮ

ಚನ್ನಗಿರಿ, ಅ. 17- ಕೃಷಿ ಸವಾಲು ಮತ್ತು ಪರಿಹಾರಗಳಿಗೆ ತುಮಕೂರಿನ ಮಹಾತ್ಮ ಗಾಂಧಿ ಸಹಜ ಬೇಸಾಯ ಶಾಲೆಯ ಡಾ. ಮಂಜುನಾಥ್ ಅವರು ನಾಡಿದ್ದು ದಿನಾಂಕ 19ರ ಗುರುವಾರ ಬೆಳಿಗ್ಗೆ 11 ಗಂಟೆಗೆ ತಾಲ್ಲೂಕಿನ ಪಾಂಡೋಮಟ್ಟಿ ವಿರಕ್ತಮಠದಲ್ಲಿ ರೈತರೊಡನೆ ಸಂವಾದ ನಡೆಸಲಿದ್ದಾರೆ.

ರೈತರು ಹಲವಾರು ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಈ ಸಮಸ್ಯೆಗಳು ಪರೋಕ್ಷವಾಗಿ ಮತ್ತು ನೇರವಾಗಿ ರೈತರ ಜೀವನದ ಮೇಲೆ ಪರಿಣಾಮ ಬೀರುತ್ತವೆ. ನೀರು, ಬರಗಾಲ, ಬೆಲೆ ಏರಿಕೆಗಳಿಂದ ಹಣದ ಕೊರತೆ, ರೈತರ ಕಾಳು ಕಡಿ ಉತ್ಪಾದನಾ ವೆಚ್ಚಕ್ಕೆ ಸರಿಯಾದ ಬೆಲೆ ನಿಗದಿ ಇಲ್ಲದಿರುವುದು. ಕೆಲವೊಮ್ಮೆ ಅತೀ ಹೆಚ್ಚು ಮಳೆ, ಅತೀ ರಾಸಾಯನಿಕ ಗೊಬ್ಬರ ಮತ್ತು ಔಷಧಿಗಳ ಬಳಕೆಯಿಂದ ಭೂಮಿಯ ಕ್ಷಾರ ಇತ್ಯಾದಿ ಇದ್ದೇ ಇವೆ. ಇಂತಹ ವಿಷಯಗಳಿಗೆ ಸಂವಾದ ನಡೆಯಲಿದ್ದು, ಈ ಅತ್ಯುಪಯುಕ್ತ ಮಾಹಿತಿಗಳನ್ನು ತಮ್ಮ ಕೃಷಿಯಲ್ಲಿ ಅಳವಡಿಸಿಕೊಂಡು ತಮ್ಮ ಕೃಷಿ ಜೀವನವನ್ನು ಆನಂದಭರಿತವಾಗಿ ಮಾಡಿಕೊಳ್ಳಲು ಆಗಮಿಸಬೇಕಾಗಿ ವಿರಕ್ತ ಮಠದ ಶ್ರೀ ಗುರುಬಸವ ಸ್ವಾಮೀಜಿ, ಮಹಿಮಾ ಜೆ. ಪಟೇಲ್, ಕರುಣಾ ಜೀವ ಕಲ್ಯಾಣ ಟ್ರಸ್ಟಿನ ಉದಯ್ ಕುಮಾರ್, ಶಿವನಕೆರೆ ಬಸವಲಿಂಗಪ್ಪ ವಿನಂತಿಸಿದ್ದಾರೆ.

# ದಿಗ್ವಿಜಯ್ ಬಟ್ಟೆ ಹರಿಯಿರಿ ಎಂದ ಕಮಲ್ ನಾಥ್



ಭೂಪಾಲ್, ಅ. 17 – ಮಧ್ಯಪ್ರದೇಶದ ಶಿವಪುರಿ ಕ್ಷೇತ್ರದ ಟಿಕೆಟ್‌ಗೆ ಸಂಬಂಧಿಸಿದಂತೆ ಕಾಂಗ್ರೆಸ್ ಹಿರಿಯ ನಾಯಕ ದಿಗ್ವಿಜಯ್ ಸಿಂಗ್ ಬಟ್ಟೆ ಹರಿದು ಹಾಕುವಂತೆ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಕಮಲ್ ನಾಥ್ ಹೇಳಿರುವ ವಿಡಿಯೋ ವೈರಲ್ ಆಗಿದೆ.

ಬಿಜೆಪಿಯ ಮಾಜಿ ಶಾಸಕ ವೀರೇಂದ್ರ ರಘುವಂಶಿ ಅವರು ಇತ್ತೀಚೆಗೆ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು. ಅವರಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸುವುದಾಗಿ ಕಮಲ್ ನಾಥ್ ಹೇಳಿದ್ದರು. ಆದರೆ, ಈ ಕ್ಷೇತ್ರದ ಟಿಕೆಟ್ ಅನ್ನು ಪಿಛೋರೆ ಕ್ಷೇತ್ರದಿಂದ ಆರು ಬಾರಿ ಶಾಸಕರಾಗಿದ್ದ ಕೆ.ಪಿ. ಸಿಂಗ್ ಅವರಿಗೆ ನೀಡಲಾಗಿತ್ತು.

ನಂತರ ರಘುವಂಶಿ ಬೆಂಬಲಿಗರು ಭೂಪಾಲದಲ್ಲಿರುವ ಕಮಲ್ ನಾಥ್ ನಿವಾಸಕ್ಕೆ ತೆರಳಿದ್ದರು.

ಈ ಸಂದರ್ಭದಲ್ಲಿ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ ಕಮಲ್ ನಾಥ್, ರಘುವಂಶಿಗೆ ಟಿಕೆಟ್ ನೀಡುವ ವಿಷಯವನ್ನು ನಾನು ದಿಗ್ವಿಜಯ್ ಸಿಂಗ್ ಹಾಗೂ ಅವರ ಮಗ ಜೈವರ್ಧನ್ ಸಿಂಗ್ ಅವರಿಗೆ ವಹಿಸಿದ್ದೆ. ಅಲ್ಲಿ ಗೊಂದಲವಾಗಿರಬಹುದು ಎಂದರು.

ಈ ವಿಷಯಕ್ಕೆ ಸಂಬಂಧಿಸಿದಂತೆ ದಿಗ್ವಿಜಯ್ ಸಿಂಗ್ ಬಟ್ಟೆ ಹರಿದು ಹಾಕಿ ಎಂದು ಕಮಲ್ ನಾಥ್ ಹೇಳಿರುವುದು ವಿಡಿಯೋದಲ್ಲಿ ದಾಖಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ದಿಗ್ವಿಜಯ್ ಸಿಂಗ್, ಶಾಂತವಾಗಿ ಪರಿಹಾರ ಕಂಡುಕೊಳ್ಳಬೇಕಿದೆ ಎಂದಿದ್ದಾರೆ.

ಆದರೆ, ಈ ವಿಷಯದಿಂದಾಗಿ ಪಕ್ಷದಲ್ಲಿ ಯಾವುದೇ ಒಡಕಾಗಿಲ್ಲ ಎಂದು ಕಮಲ್ ನಾಥ್ ಹಾಗೂ ದಿಗ್ವಿಜಯ್ ಸಿಂಗ್ ಅವರಿಬ್ಬರೂ ಹೇಳಿಕೆ ನೀಡಿದ್ದಾರೆ.


MARRYS CONVENT AND PU COLLEGE
Vinobanagara, Davangere.

WANTED

An Experienced lady Teachers with Excellent English Fluency

| Subject | Post | Qualification |
|---|---|---|
| Science | 03 | Bsc., (CBZ), B.Ed., |
| Mathematics | 03 | Bsc., Msc., B.Ed., |
| Primary Sections | 04 | Bsc., |

Contact : 9449 702778, 9481 909493


**ಮಾನ್ಯ ಭೂ ಮಾಪನ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪನಿರ್ದೇಶಕರ ನ್ಯಾಯಾಲಯ, ದಾವಣಗೆರೆ.**

**ಭೂ.ಸ.ನಿ.ಆರ್. ಸಂಖ್ಯೆ : 561/2023-24**

ಅಪೀಲುದಾರರು : ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ದಾವಣಗೆರೆ ತಾಲ್ಲೂಕು
- ವಿರುದ್ಧ- ಎದುರುದಾರರು : 1) ಶಾಂತಮ್ಮ ಕೋಂ ರುದ್ರಪ್ಪ, ವಯಸ್ಕರರು 2) ಲಿಂಗರಾಜು ಬಿನ್ ರುದ್ರಪ್ಪ, ವಯಸ್ಕರರು 1 ಮತ್ತು 2 ತೋಳಹುಣಸೆ ಗ್ರಾಮ, ದಾವಣಗೆರೆ ತಾಲ್ಲೂಕು 3) ಕೆ.ಎಸ್. ಲೋಕೇಶ್ ಬಿನ್ ಸಿದ್ದಪ್ಪ ಕುರುವತ್ತಿ ತೋಳಹುಣಸೆ ಗ್ರಾಮ, ದಾವಣಗೆರೆ ತಾಲ್ಲೂಕು.
ಉದ್ದೇಶಿತ ಎದುರುದಾರರು : 4) ಕೆ.ಬಿ. ಚನ್ನಪ್ಪ ಬಿನ್ ಕೆ. ಬಸಪ್ಪ, ದಾವಣಗೆರೆ ಸಿಟಿ.

**ಸಿಪಿಸಿ ಆದೇಶ 5 ನಿಯಮ 20ರ ಅಡಿಯಲ್ಲಿ ನೀಡಲಾದ ಪ್ರಕಟಣಾ ನೋಟೀಸ್**

ಮೇಲ್ಕಂಡ ಪ್ರತಿವಾದಿ 1 ಮತ್ತು 2 ಮತ್ತು ಇತರರ ವಿರುದ್ಧ ಕೇಸನ್ನು ಮೇಲಿನ ನ್ಯಾಯಾಲಯದಲ್ಲಿ ದಾಖಲಿಸಿದ್ದು, ಅವರಿಗೆ ಈ ಮೂಲಕ ನೋಟೀಸ್ ನೀಡುತ್ತಿದ್ದು, ಅದೇ ರೀತಿ ಉದ್ದೇಶಿತ 4ನೇಯ ಪ್ರತಿವಾದಿಯನ್ನಾಗಿ ಕೆ.ಬಿ. ಚನ್ನಪ್ಪ ಬಿನ್ ಕೆ. ಬಸಪ್ಪ ಇವರನ್ನು ಸಿಪಿಸಿ ಆದೇಶ 1 ನಿಯಮ 10/2 ರಲ್ಲಿ R/W Sec. 151ರ ಅಡಿಯಲ್ಲಿ ಸೇರಿಸಲು ಉದ್ದೇಶಿಸಿದ್ದು, ಪ್ರತಿವಾದಿ 1 ಮತ್ತು 2 ಉದ್ದೇಶಿತ ಪ್ರತಿವಾದಿ 4ರವರೆಗೆ ಈ ಪತ್ರಿಕೆಯ ಪ್ರಕಟಣೆಯ ಮೂಲಕ ನೋಟೀಸ್ ನೀಡಿದ್ದು, ಮೇಲ್ಕಂಡ ಕೇಸ್ 26/10/2023 ರಂದು ಮಧ್ಯಾಹ್ನ 3.00 ಗಂಟೆಗೆ ಮುದ್ಧತ್ತಿಗೆ ಇದ್ದು, ತಾವುಗಳು ಖುದ್ದಾಗಿ ಆಗಲೀ ಅಥವಾ ನಿಮ್ಮ ವಕೀಲರ ಮುಖಾಂತರವಾಗಲೀ ಹಾಜರಾಗಿ ನಿಮ್ಮಲ್ಲಿರುವ ಮೂಲ ದಾಖಲೆಗಳೊಂದಿಗೆ ಹಾಜರಾಗಿ ನಿಮ್ಮ ಅಹವಾಲನ್ನು ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಪ್ರಕರಣದ ಬಗ್ಗೆ ಏಕ ಪಕ್ಷೀಯವಾಗಿ ತೀರ್ಮಾನ ಕೈಗೊಳ್ಳಲಾಗುವುದು.

ಷೆಡ್ಯೂಲ್ : ದಾವಣಗೆರೆ ತಾಲ್ಲೂಕು, ಆನಗೋಡು ಹೋಬಳಿ, ತೋಳಹುಣಸೆ ಗ್ರಾಮ ರಿ.ಸ.ನಂ. 120/3, 7 ರಲ್ಲಿನ ಪೋಡುಗಳನ್ನು ರದ್ದುಪಡಿಸುವ ಕುರಿತಂತೆ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ : 13.10.2023 ರಂದು ಕೊಡಲ್ಪಟ್ಟಿದೆ.

**ನ್ಯಾಯಾಲಯದ ಆದೇಶದ ಮೇರೆಗೆ**
**ಸಹಿ/- ಶಿರಸ್ತೇದಾರರು/ಸೂಪರಿಂಟೆಂಡೆಂಟ್**
**ಡಿಡಿಎಲ್‌ಆರ್ ನ್ಯಾಯಾಲಯ, ದಾವಣಗೆರೆ.**




ಶಿವ ಸಹಕಾರಿ ಬ್ಯಾಂಕ್ ನಿಯಮಿತ,
ಆಡಳಿತ ಕಛೇರಿ, ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ - 577001



ನಮ್ಮ ಬ್ಯಾಂಕಿನ ಸಂಸ್ಥಾಪಕರಾದ ಆರೋಢ ದಾಸೋಹಿ, ಧರ್ಮ ಚಿಂತಾಮಣಿ, ಮಹಾಶರಣ
ಮಾಗನೂರು ಬಸಪ್ಪನವರ ನೂತನ ಕಂಚಿನ ಪುತ್ಥಳಿಯ ಪ್ರತಿಷ್ಠಾಪನಾ ಕಾರ್ಯಕ್ರಮಕ್ಕೆ

ಶುಭ ಕೋರುವವರು : ಬ್ಯಾಂಕಿನ ಆಡಳಿತ ಮಂಡಲಿ ಸದಸ್ಯರು, ವ್ಯವಸ್ಥಾಪನಾ ಮಂಡಲಿ ಸದಸ್ಯರು ಮತ್ತು ಬ್ಯಾಂಕಿನ ಸರ್ವ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು.

ದಿನಾಂಕ : 18.10.2023 ಸಮಯ : ಬೆಳಿಗ್ಗೆ 10.30ಕ್ಕೆ ಸ್ಥಳ : ಮಾಗನೂರು ಬಸಪ್ಪ ಶಾಲಾ ಆವರಣ, ತರಳಬಾಳು ಬಡಾವಣೆ, ದಾವಣಗೆರೆ.

## ರಜಾ ಮಜಾ...



ಚಿತ್ರ : ಜಿಗಳಿ ಪ್ರಕಾಶ್

ಸರ್ಕಾರಿ ಶಾಲೆಗಳಿಗೆ ದಸರಾ ರಜೆ ನೀಡಿರುವುದರಿಂದ ಮಲೇಬೆನ್ನೂರು ಸಮೀಪದ ಕೊಮಾರನಹಳ್ಳಿಯಲ್ಲಿ ಹರಿಯುವ ಭದ್ರಾ ಚಾನಲ್‌ನಲ್ಲಿ ಮಕ್ಕಳು ಡೈ ಹೊಡೆದು ಈಜಾಡಿ ಗಮನ ಸೆಳೆದರು.

# ಜ್ಞಾನ ಹೆಚ್ಚಿಸಿಕೊಳ್ಳಲು ಕಾರ್ಯಾಗಾರಗಳು ಅತ್ಯವಶ್ಯ

### ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದಲ್ಲಿ ನಡೆದ ಉಪನ್ಯಾಸ ಮಾಲಿಕೆಯಲ್ಲಿ ನ್ಯಾಯಾಧೀಶರಾದ ರಾಜೇಶ್ವರಿ ಹೆಗಡೆ



ದಾವಣಗೆರೆ, ಅ. 17 - ಕಾನೂನು ಕಾರ್ಯಾಗಾರಗಳು ಯುವ ವಕೀಲರ ಅಧ್ಯಯನಕ್ಕೆ ಅತ್ಯಂತ ಅವಶ್ಯಕವಾಗಿದ್ದು, ಕಾರ್ಯಾಗಾರಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ಜ್ಞಾನ ಸಂಪತ್ತನ್ನು ಹೆಚ್ಚಿಸಿಕೊಂಡು ಪ್ರಕರಣಗಳ ವಿಲೇವಾರಿಗೆ ಮುಂದಾಗಬೇಕೆಂದು ಪ್ರಧಾನ ಜಿಲ್ಲಾ ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್.ಹೆಗಡೆ ಸಲಹೆ ನೀಡಿದರು.

ಜಿಲ್ಲಾ ವಕೀಲರ ಸಂಘದಿಂದ ನಗರದ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದಲ್ಲಿನ ವಕೀಲರ ಸಾಂಸ್ಕೃತಿಕ ಸಮುದಾಯ ಭವನದಲ್ಲಿ ಆಯೋಜಿಸಲಾಗಿದ್ದ ಉಪನ್ಯಾಸ ಮಾಲಿಕೆಯಲ್ಲಿ ಗ್ರಾಹಕರ ಸಂರಕ್ಷಣಾ ಕಾಯ್ದೆ -2019 ಕುರಿತು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಂವಿಧಾನದ ಯಾವುದೇ ರಾಷ್ಟ್ರದಲ್ಲಿ ತನ್ನ ಸಂವಿಧಾನದ ಚೌಕಟ್ಟಿನೊಳಗೆ ಕಾಲಕಾಲಕ್ಕೆ ಕಾನೂನುಗಳನ್ನು ಜಾರಿಗೆ ತಂದು ಜನರ ಹಕ್ಕುಗಳನ್ನು ಕಾಪಾಡಲಾಗುತ್ತದೆ. ಆಧುನಿಕ ಜಗತ್ತಿನಲ್ಲಿ ಕಾನೂನುಗಳ ಬಗ್ಗೆ ತಿಳಿದುಕೊಳ್ಳುವುದು ಅತ್ಯಂತ ಅವಶ್ಯಕವಿದ್ದು, ಈ ನಿಟ್ಟಿನಲ್ಲಿ ಜಿಲ್ಲಾ ವಕೀಲರ ಸಂಘವು ಉಪನ್ಯಾಸಗಳನ್ನು ಏರ್ಪಡಿಸುತ್ತಿರುವುದು ಶ್ಲಾಘನೀಯ. ಕಾನೂನು ನಿರಂತರವಾಗಿ ಬದಲಾಗುವ ಮತ್ತು ವಿಕಸನಗೊಳ್ಳುವ ವಿಷಯವಾಗಿರುವುದರಿಂದ ಅವುಗಳ ಅಧ್ಯಯನ ಮಾಡಲು ಮತ್ತು ತಿಳಿದುಕೊಳ್ಳಲು ಉಪನ್ಯಾಸ ಮಾಲಿಕೆಗಳು ಅವಶ್ಯಕವಾಗಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್, ವಕೀಲರ ಜ್ಞಾನ ಸಂಪತ್ತು ಹೆಚ್ಚುವುದರಿಂದ ಸಮಾಜಕ್ಕೆ, ಪ್ರಕರಣಗಳಿಗೆ ನ್ಯಾಯ ದೊರಕಿಸಲು ಸಾಧ್ಯವಾಗುತ್ತದೆ. ಗ್ರಾಹಕರ ಹಿತರಕ್ಷಣಾ ಕಾಯಿದೆ ಗ್ರಾಹಕರ ಸಂರಕ್ಷಣೆ ಹಿತದ ಹಿನ್ನೆಲೆಯಲ್ಲಿ ಆದ ಕಾನೂನು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ನ್ಯಾಯಯುತ ಸಮಾಜ ನಿರ್ಮಾಣ ಮಾಡುವಲ್ಲಿ, ಶಾಂತಿ, ಸುವ್ಯವಸ್ಥೆ ಕಾಪಾಡುವಲ್ಲಿ ವಕೀಲರ ಸಹಕಾರ ಮುಖ್ಯವಾಗಿದ್ದು, ನ್ಯಾಯಾಂಗ ಮತ್ತು ಕಾರ್ಯಾಂಗಗಳು ಸೌಹಾರ್ದಯುತವಾಗಿ ಉತ್ತಮ ಸಮಾಜದ ನಿರ್ಮಾಣಕ್ಕೆ ಕಾರ್ಯೋನ್ಮುಖರಾಗಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಎಚ್. ಅರುಣ ಕುಮಾರ್ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳು ಸಮರ್ಪಕವಾಗಿ ತಮ್ಮ ಕಾರ್ಯ ನಿರ್ವಹಿಸಿದಾಗ ಮಾತ್ರ ಸಂವಿಧಾನದ ಆಶಯಗಳು ಅನುಷ್ಠಾನಗೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಜಿಲ್ಲಾ ವಕೀಲರ ಸಂಘವು ಎಲ್ಲಾ ಇಲಾಖೆಗಳೊಂದಿಗೆ ಸಮನ್ವಯತೆ ಸಾಧಿಸಿ, ಉತ್ತಮ ಸಮಾಜ ನಿರ್ಮಾಣ ಮಾಡಲು ಮುಂದಾಗಿದೆ ಎಂದು ಹೇಳಿದರು.

ಜಿಲ್ಲಾ ಗ್ರಾಹಕರ ಆಯೋಗದ ಅಧ್ಯಕ್ಷ ಮಹಾಂತೇಶ್ ಈರಪ್ಪ ಶಿಗ್ಲಿ ಉಪನ್ಯಾಸ ನೀಡಿದರು. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ವಿಜಯಾನಂದ, ಮಕ್ಕಳ ಸ್ನೇಹಿ ನ್ಯಾಯಾಲಯದ ಎನ್. ಶ್ರೀಪಾದ, 2ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ಪ್ರವೀಣ್‌ಕುಮಾರ್, ಕೌಟುಂಬಿಕ ನ್ಯಾಯಾಲಯದ ನ್ಯಾಯಾಧೀಶರಾದ ಧಶರಥ್ ಸೇರಿದಂತೆ ಸ್ಥಳೀಯ ಎಲ್ಲಾ ನ್ಯಾಯಾಧೀಶರು ಇದ್ದರು.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಜಿ.ಕೆ. ಬಸವರಾಜ್ ಗೋಪನಾಳ್, ಕಾರ್ಯದರ್ಶಿ ಎಸ್. ಬಸವರಾಜ್ ಸಹ ಕಾರ್ಯದರ್ಶಿ ಎ.ಎಸ್. ಮಂಜುನಾಥ್, ಕಾರ್ಯಕಾರಿ ಸಮಿತಿ ಸದಸ್ಯರಾದ ವಾಗೀಶ ಕಟ್ಟಿಗಿಹಳ್ಳಿ ಮಠ, ಅಜೇಯ ಆವರಗೆರೆ, ಎಲ್. ನಾಗರಾಜ್, ಮಧುಸೂದನ್, ನೀಲಕಂಠಯ್ಯ, ಭಾಗ್ಯಲಕ್ಷ್ಮಿ, ಚೌಡಪ್ಪ ಇತರರು ಇದ್ದರು.

ಇದೇ ವೇಳೆ ಜಿಲ್ಲಾಧಿಕಾರಿ, ಜಿಲ್ಲಾ ರಕ್ಷಣಾಧಿಕಾರಿ, ಗ್ರಾಹಕರ ಆಯೋಗದ ಅಧ್ಯಕ್ಷರಿಗೆ ಸನ್ಮಾನಿಸಿ ಗೌರವಿಸಲಾಯಿತು.

# ಲೆಬನಾನ್ ಗಡಿಯಲ್ಲಿ ನಾಲ್ವರು ಉಗ್ರರು ಹತ

ಬ್ಯೂರತ್, ಅ. 17 – ಇಸ್ರೇಲ್ ಹಾಗೂ ಲೆಬನಾನ್ ಗಡಿಯಲ್ಲಿ ನಡೆದ ಸಂಘರ್ಷದಲ್ಲಿ ನಾಲ್ವರು ಹಿಜ್ಬೊಲ್ಲಾ ಉಗ್ರರು ಹತರಾಗಿದ್ದಾರೆ. ಇದರಿಂದಾಗಿ ಗಡಿಯಲ್ಲಿ ಉದ್ವಿಗ್ನತೆ ಹೆಚ್ಚಾಗಿದೆ.

ಗಾಜಾ ಸಂಘರ್ಷ ಆರಂಭವಾದ ನಂತರದಿಂದಲೂ ಇಸ್ರೇಲ್ ಪಡೆಗಳು ಹಾಗೂ ಲೆಬನಾನ್ ಉಗ್ರರ ನಡುವೆ ಚಕಮಕಿ ನಡೆಯುತ್ತಲೇ ಇದೆ. ಒಂದೇ ದಿನ ನಾಲ್ವರು ಸಾವನ್ನಪ್ಪಿರುವುದು ಇದೇ ಮೊದಲು.

ಇದರಿಂದಾಗಿ ಲೆಬನಾನ್ ಒಳಗೂ ಸಂಘರ್ಷ ಹರಡುವ ಕಳವಳ ಉಂಟಾಗಿದೆ. ಲೆಬನಾನ್‌ನಲ್ಲಿರುವ ಹೆಜ್ಬೊಲ್ಲಾ ಉಗ್ರರು ಪ್ಯಾಲೆಸ್ತೇನ್ ಉಗ್ರವಾದಿ ಸಂಘಟನೆಗಳಿಗೆ ಬೆಂಬಲ ನೀಡುತ್ತಿದ್ದಾರೆ. ಭಾರೀ ಶಸ್ತ್ರಾಸ್ತ್ರ ಹೊಂದಿರುವ ಲೆಬನಾನ್ ಉಗ್ರರು ದೊಡ್ಡ ಬೆದರಿಕೆ ಎಂದು ಇಸ್ರೇಲ್ ಪರಿಗಣಿಸುತ್ತಿದೆ.

ಹೆಜ್ಬೊಲ್ಲಾ ಉಗ್ರರು ಹೊಸ ಹೋರಾಟ ಆರಂಭಿಸಿದರೆ, ಲೆಬನಾನ್‌ನ ಎಲ್ಲಾ ಜನತೆ ಸಂಕಷ್ಟ ಎದುರಿಸಬೇಕಾಗುತ್ತದೆ ಎಂದು ಇಸ್ರೇಲ್ ಎಚ್ಚರಿಸಿದೆ.

ಸಂಘರ್ಷ ಲೆಬನಾನ್ ಹಾಗೂ ಅದರಾಚೆಗೂ ವಿಸ್ತರಿಸುವುದನ್ನು ತಡೆಯಲು ಜಾಗತಿಕವಾಗಿ ಪ್ರಯತ್ನಗಳು ನಡೆಯುತ್ತಿವೆ.

## ವಿದ್ಯಾನಗರದ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದಲ್ಲಿ ಶ್ರೀ ದೇವಿಯ ಪುರಾಣ



ದಾವಣಗೆರೆ, ಅ. 17 - ವಿದ್ಯಾನಗರದ ಶ್ರೀ ಈಶ್ವರ -ಪಾರ್ವತಿ -ಗಣಪತಿ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ ಶ್ರೀದೇವಿಯ ಪುರಾಣವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಲಾಯಿತು. ದೇವಸ್ಥಾನದ ಅಧ್ಯಕ್ಷ ಬೆಳವನೂರು ನಾಗರಾಜಪ್ಪ ಹಾಗೂ ಟ್ರಸ್ಟ್ ಸದಸ್ಯ ಮಂಜುನಾಥ ಕುರ್ಕಿ, ಅಮರಯ್ಯ ಶಾಸ್ತ್ರಿಗಳು, ಶರಣಯ್ಯ ಗವಾಯಿಗಳು, ಸಂತೋಷ್ ಕುಮಾರ್ ಉಪಸ್ಥಿತರಿದ್ದರು.

# ಐ.ಪಿ.ಎಲ್., ವಿದ್ಯಾರ್ಥಿಗಳಿಗೆ ಹಣ, ಆರೋಗ್ಯ ವಿಮೆ

**ಮಧ್ಯಪ್ರದೇಶ ಚುನಾವಣೆಗೆ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಭರವಸೆಗಳ ಮಹಾಪೂರ**

ಭೂಪಾಲ್, ಅ. 17 – ಮಧ್ಯಪ್ರದೇಶ ವಿಧಾನಸಭಾ ಚುನಾವಣೆಗಾಗಿ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಹಲವಾರು ಕೊಡುಗೆಗಳನ್ನು ಪ್ರಕಟಿಸಿದೆ. ಇದರಲ್ಲಿ ರಾಜ್ಯಕ್ಕೆ ಐ.ಪಿ.ಎಲ್. ತಂಡ ಆರಂಭಿಸುವುದೂ ಸೇರಿದೆ.

ಕಾಂಗ್ರೆಸ್ ಪಕ್ಷ 106 ಪುಟಗಳ ಪ್ರಣಾಳಿಕೆ ಬಿಡುಗಡೆ ಮಾಡಿದೆ. ಇದರಲ್ಲಿ 59 ಭರವಸೆಗಳು ಹಾಗೂ 101 ಗ್ಯಾರಂಟಿಗಳು ಸೇರಿವೆ. ಇದರಲ್ಲಿ ಜಾತಿ ಸಮೀಕ್ಷೆ, ಒ.ಬಿ.ಸಿ. ವರ್ಗದವರಿಗೆ ಶೇ.27ರ ಮೀಸಲಾತಿ, ಎಲ್ಲರಿಗೂ 25 ಲಕ್ಷ ರೂ.ಗಳ ವೈದ್ಯಕೀಯ ವಿಮೆ ಹಾಗೂ ರೈತರ ಸಾಲ ಮನ್ನಾ ಸಹ ಸೇರಿದೆ.

ಅಡುಗೆ ಅನಿಲ ಸಿಲಿಂಡರ್ ಅನ್ನು 500 ರೂ. ದರದಲ್ಲಿ ಮಾರಲಾಗುವುದು ಹಾಗೂ ರಾಜ್ಯಕ್ಕೆ ಐ.ಪಿ.ಎಲ್. ತಂಡ ರಚಿಸಲಾಗುವುದು ಎಂದೂ ಭರವಸೆಗಳಲ್ಲಿ ತಿಳಿಸಲಾಗಿದೆ.

ಪ್ರಣಾಳಿಕೆಯಲ್ಲಿನ ಇತರೆ ಭರವಸೆಗಳೆಂದರೆ, ಮಹಿಳೆಯರಿಗೆ ಪ್ರತಿ ತಿಂಗಳು 1,500 ರೂ., 100 ಯುನಿಟ್ ಉಚಿತ ವಿದ್ಯುತ್, ರೈತರಿಗೆ 5 ಹೆಚ್.ಪಿ. ಉಚಿತ ಮೋಟರ್ ಸಂಪರ್ಕ, ರೈತರ ವಿದ್ಯುತ್ ಬಾಕಿ ಮನ್ನಾ, 10 ಲಕ್ಷ ರೂ.ಗಳ ಉಚಿತ ಅಪಘಾತ ವಿಮೆ.

ಗೋಧಿಯನ್ನು ಕನಿಷ್ಠ ಕ್ವಿಂಟಾಲ್‌ಗೆ 2,600 ರೂ.ಗಳಂತೆ ಹಾಗೂ ಅಕ್ಕಿಯನ್ನು 2,500 ರೂ. ಗಳಂತೆ ಖರೀದಿಸಲಾಗುವುದು.

ಹಳೆಯ ಪಿಂಚಣಿ ಯೋಜನೆ ಜಾರಿಗೆ ತರಲಾಗುವುದು, ದಿವ್ಯಾಂಗರಿಗೆ 2,000 ರೂ. ಮಾಸಾಶನ ನೀಡಲಾಗುವುದು ಎಂಬ ಭರವಸೆ ನೀಡಲಾಗಿದೆ.

1ರಿಂದ 8ನೇ ತರಗತಿಯ ವಿದ್ಯಾರ್ಥಿಗಳಿಗೆ ತಿಂಗಳಿಗೆ 500 ರೂ., 9-10ನೇ ತರಗತಿಯವರಿಗೆ 1,000 ರೂ. ಹಾಗೂ 11 ಮತ್ತು 12ನೇ ತರಗತಿಯವರಿಗೆ ತಿಂಗಳಿಗೆ 1,500 ರೂ. ನೀಡಲಾಗುವುದು. ರಾಜ್ಯದಲ್ಲಿ ಶಾಲಾ ಶಿಕ್ಷಣ ಉಚಿತಗೊಳಿಸಲಾಗುವುದು ಎಂದು ಪ್ರಣಾಳಿಕೆಯಲ್ಲಿ ತಿಳಿಸಲಾಗಿದೆ.

## 'ದಸರಾ' ಕವನ ಬರೆಯುವ ಸ್ಪರ್ಧೆ

ದಾವಣಗೆರೆ, ಅ. 17 - ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ 'ದಸರಾ ಕಾವ್ಯ ರಸಾಸ್ವಾದ' ಕವನ ರಚಿಸುವ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ದಸರಾ ಹಬ್ಬದ ಕುರಿತು 15 ರಿಂದ 20 ಸಾಲುಗಳಲ್ಲಿ ತಮ್ಮ ಮೊಬೈಲ್‌ಗಳಲ್ಲಿ ಕವನ ರಚಿಸಿ, ಇದೇ ದಿನಾಂಕ 30 ರೊಳಗೆ ವ್ಯಾಟ್ಸಪ್ (94492 72463) ಕಳಿಸಬಹುದಾಗಿದೆ. ವಿವರಕ್ಕೆ ಸಂಪರ್ಕಿಸಿ : 95387 32777


ಬೇಕಾಗಿದ್ದಾರೆ

ನಮ್ಮ ಶೋ ರೂಂನಲ್ಲಿ ಸೇಲ್ಸ್ ಮಾಡಲು ಅನುಭವವುಳ್ಳ ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ

ಶಾಂತಲಾ
ದಿ ವೆಡ್ಡಿಂಗ್ ಮಾಲ್....
ಚಾಮರಾಜ ಪೇಟೆ, ದಾವಣಗೆರೆ.
9686195327


# ಮೀಸಲಾತಿಯಿಂದ ದುರ್ಬಲವಾದ ಪಾಲಿಕೆ ಸದಸ್ಯರು

**ದೇಶದ ಶೇ.39ರಷ್ಟು ರಾಜಧಾನಿಗಳು ಸಕ್ರಿಯ ನಗರ ಯೋಜನೆಯನ್ನೇ ಹೊಂದಿಲ್ಲ**

ನವದೆಹಲಿ, ಅ. 17 – ದೇಶದ ಶೇ.39ರಷ್ಟು ರಾಜಧಾನಿಗಳು ಸಕ್ರಿಯ ನಗರ ಮಹಾಯೋಜನೆ ಹೊಂದಿಲ್ಲ ಎಂದು ಬೆಂಗಳೂರಿನ ಸಂಸ್ಥೆಯಾದ ಜನಾಗ್ರಹ ನಡೆಸಿದ ಸಮೀಕ್ಷೆ ತಿಳಿಸಿದೆ.

ಮೇಯರ್‌ಗಳು ಹಾಗೂ ಪಾಲಿಕೆ ಸದಸ್ಯರು ನಗರ ಪಾಲಿಕೆಗಳ ಕಾರ್ಯನಿರ್ವಹಣೆಯಲ್ಲಿ ಸೀಮಿತ ಪಾತ್ರ ಹೊಂದಿದ್ದಾರೆ ಎಂದೂ ವರದಿಯಲ್ಲಿ ತಿಳಿಸಲಾಗಿದೆ. ದಿ ಆನ್ಯುಯಲ್ ಸರ್ವೆ ಆಫ್ ಇಂಡಿಯಾಸ್ ಸಿಟಿ ಸಿಸ್ಟಂ - 2023 ವರದಿಯನ್ನು ಕೇಂದ್ರ ನಗರಾಭಿವೃದ್ಧಿ ಸಚಿವ ಹರ್‌ದೀಪ್ ಸಿಂಗ್ ಪುರಿ ಬಿಡುಗಡೆ ಮಾಡಿದ್ದಾರೆ.

ಮೇಯರ್‌ಗಳು ಹಾಗೂ ಪಾಲಿಕೆ ಸದಸ್ಯರ ಸೀಮಿತ ಕಾರ್ಯನಿರ್ವಹಣೆಯಿಂದಾಗಿ ಅವರ ಅಧಿಕಾರ ಕಡಿಮೆ ಇದೆ. ಅವರು ಅಲ್ಪ ಅವಧಿಗೆ ಕಾರ್ಯ ನಿರ್ವಹಿಸುವುದು ಹಾಗೂ ಮೀಸಲಾತಿ ರೊಟೇಷನ್ ಕಾರಣದಿಂದ ಹೆಚ್ಚು ಸಮರ್ಥರಾಗಲು ಸಾಧ್ಯವಾಗುತ್ತಿಲ್ಲ ಎಂದು ವರದಿ ತಿಳಿಸಿದೆ. ಇದರಿಂದಾಗಿ ಪಾಲಿಕೆಗಳು ಸಮಗ್ರ ಸ್ಥಳೀಯ ಆಡಳಿತವಾಗುವ ಬದಲು ಒಂದು ನಾಗರಿಕ ಸೇವೆಗಳ ಸಂಸ್ಥೆಯಾಗಿಯಷ್ಟೇ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

ನಗರಗಳಲ್ಲಿ ಸಮರ್ಥ ಸೇವೆಗಾಗಿ ಯೋಜನೆ ಮೂಲಭೂತ ಅಗತ್ಯ. ಆದರೆ, ದೇಶದ ರಾಜಧಾನಿ ನಗರಗಳಲ್ಲಿ ಶೇ.39ರಷ್ಟು ಸಕ್ರಿಯ ಮಹಾ ಯೋಜನೆಯನ್ನೇ ಹೊಂದಿಲ್ಲ ಎಂದು ವರದಿಯಲ್ಲಿ ಹೇಳಲಾಗಿದೆ.


ಭಾವಪೂರ್ಣ ಶ್ರದ್ಧಾಂಜಲಿ



ದಿ. 03.10.2023ರಂದು ನಿಧನರಾದ ದಾವಣಗೆರೆ ಜಿಲ್ಲಾ ಈಡಿಗ ಸಂಘದ ಮಾಜಿ ಉಪಾಧ್ಯಕ್ಷರು ಹಾಗೂ ಶ್ರೀ ರೇಣುಕಾಂಬ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ., ದಾವಣಗೆರೆ ಇದರ ಮಾಜಿ ಅಧ್ಯಕ್ಷರಾದ **ದಿ. ಶ್ರೀ ಟಿ.ಓ. ನರಸಪ್ಪ** ಇವರ ನಿಧನಕ್ಕೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗದವರಿಗೆ ನೀಡಲೆಂದು ಪ್ರಾರ್ಥಿಸುವ

ಅಧ್ಯಕ್ಷರು ಹಾಗೂ ಪದಾಧಿಕಾರಿಗಳು,
ದಾವಣಗೆರೆ ಜಿಲ್ಲಾ ಆರ್ಯ ಈಡಿಗ ಸಂಘ, ದಾವಣಗೆರೆ.
ಅಧ್ಯಕ್ಷರು ಹಾಗೂ ಪದಾಧಿಕಾರಿಗಳು,
ಶ್ರೀ ರೇಣುಕಾಂಬ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ., ದಾವಣಗೆರೆ.
ಕಾರ್ಯದರ್ಶಿ ಹಾಗೂ ಸಿಬ್ಬಂದಿ ವರ್ಗದವರು, ಪಿಗ್ಮಿ ಸಂಗ್ರಹಣಕಾರರು,
ಶ್ರೀ ರೇಣುಕಾಂಬ ಕ್ರೆಡಿಟ್ ಕೋ-ಆಪ್ ಸೊಸೈಟಿ ಲಿ., ದಾವಣಗೆರೆ.
ಅಧ್ಯಕ್ಷರು ಹಾಗೂ ಪದಾಧಿಕಾರಿಗಳು,
ದಾವಣಗೆರೆ ಜಿಲ್ಲಾ ಆರ್ಯ ಈಡಿಗ ಮಹಿಳಾ ಸಂಘ, ದಾವಣಗೆರೆ.



ignite Solar self ignited

ರೈತರಿಗೆ ಒಂದು ಸಿಹಿ ಸುದ್ದಿ

ಸೋಲಾರ್ ಡಿ.ಸಿ. ಪಂಪ್ ಅತೀ ಕಡಿಮೆ ಬೆಲೆಯಲ್ಲಿ ಅಳವಡಿಸಿ, ನೀರಿನ ಸಮಸ್ಯೆಯನ್ನು ಬಗೆಹರಿಸಿಕೊಳ್ಳಿ.




| ಹೆಚ್.ಪಿ | ಬೋರ್ ಆಳ | ಪೈಪ್ | ಲೀ / ಹವರ್ | ರೂಗಳಲ್ಲಿ |
|---|---|---|---|---|
| 1 HP | - 150 ಅಡಿ | 2" | 6500 | 155000 |
| 3 HP | - 220 ಅಡಿ | 2" | 14500 | 245000 |
| 5 HP | - 330 ಅಡಿ | 2" | 14500 | 285000 |
| 7.5 HP | - 420 ಅಡಿ | 2" | 10000 | 325000 |
| 10 HP | - 800 ಅಡಿ | 2" | 9500 | 388000 |

ಕರೆ ಮಾಡಿ:
98867 09334, 78927 89731


## ದಸರಾ ಕವಿಗೋಷ್ಠಿಗೆ ಎಂ. ಗೀತಾಕುಮಾರಿ



ಮೈಸೂರು ದಸರಾ ಅಂಗವಾಗಿ ನಡೆಯುವ ಮಹಿಳಾ ಕವಿಗೋಷ್ಠಿಗೆ ದಾವಣಗೆರೆಯ ಲೇಖಕಿ, ಕವಯತ್ರಿ ಎಂ. ಗೀತಾಕುಮಾರಿ ಅವರು ಆಯ್ಕೆಯಾಗಿದ್ದು, ಇಂದು ಮಧ್ಯಾಹ್ನ 2.30 ಕ್ಕೆ ಮೈಸೂರು ಮಾನಸ ಗಂಗೋತ್ರಿ ರಾವ್ ಬಹದ್ದೂರ್ ಸಭಾಂಗಣದಲ್ಲಿ ಸವಿತಾ ನಾಗಭೂಷಣ್ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಕವಿಗೋಷ್ಠಿಯಲ್ಲಿ ತಮ್ಮ ಕವನ ವಾಚನ ಮಾಡಲಿದ್ದಾರೆ.

# ಸತ್ಯ, ಅಹಿಂಸಾ ತತ್ವಗಳಿಂದ ಸ್ವಾತಂತ್ರ್ಯ ತಂದು ಕೊಟ್ಟಿದ್ದು ವಿಶ್ವದಲ್ಲೇ ಪ್ರಥಮ



ದಾವಣಗೆರೆ, ಅ. 17- ಅಸಹಕಾರ ಚಳವಳಿ, ಉಪ್ಪಿನ ಸತ್ಯಾಗ್ರಹ, ಭಾರತ ಬಿಟ್ಟು ತೊಲಗಿ ಅಹಿಂಸಾ ಚಳವಳಿಗಳ ಮೂಲಕ ಸತ್ಯ ಮತ್ತು ಅಹಿಂಸೆಯ ತತ್ವಗಳಿಂದ ಭಾರತಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದು ವಿಶ್ವದಲ್ಲೇ ಪ್ರಥಮ ಎಂದು ಜಾನಪದ ತಜ್ಞರೂ, ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ ಹೇಳಿದರು.

ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಭಾಂಗಣದಲ್ಲಿ ಮೊನ್ನೆ ಏರ್ಪಾಡಾಗಿದ್ದ ಗಾಂಧಿ, ಶಾಸ್ತ್ರೀಜಿ ಜಯಂತಿ, ಬಡವರಿಗೆ ಸೈಕಲ್ ವಿತರಣಾ ಸಮಾರಂಭದಲ್ಲಿ ಮಾತನಾಡಿದರು.

ಸತ್ಯ, ಅಹಿಂಸೆಯ ಮಾರ್ಗದಲ್ಲಿ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಮಹಾನ್ ಪುರುಷ ಗಾಂಧೀಜಿ. ಪ್ರತಿಯೊಬ್ಬರಲ್ಲಿರುವ ಮಾನವೀಯತೆ, ಮನುಷ್ಯತ್ವವನ್ನು ಹುಡುಕಿ ಹೊರತೆಗೆದವರು.'ಅಯ್ಯ ಎಂದರೆ ಸ್ವರ್ಗ, ಎಲವೋ ಎಂದರೆ ನರಕ' ಎನ್ನುವ ತತ್ವವನ್ನು ಜೀವನ ಪರ್ಯಂತ ಅನುಸರಿಸಿದವರು ಎಂದರು.

ಬುದ್ಧ, ಬಸವ, ಗಾಂಧಿ ಇವರೆಲ್ಲರೂ ಸರಳ ಸೂತ್ರಗಳನ್ನು ಅನುಸರಿಸಿದವರೇ ಆಗಿದ್ದಾರೆ. ಸತ್ಯ, ಅಹಿಂಸೆಯನ್ನು ಸಮಾಜಕ್ಕೆ ಸಾರಿದವರು. ಯಾವುದು ಸರಿಯೋ, ಯಾವುದು ಜೀವ ಸಂಕುಲಕ್ಕೆ ಒಳ್ಳೆಯದನ್ನು ಮಾಡುತ್ತದೆಯೋ ಅದನ್ನೇ ಸತ್ಯ ಎಂದು ನಂಬಿದ್ದರು. ಹೀಗೆಯೇ ಲಾಲ್ ಬಹದ್ದೂರು ಶಾಸ್ತ್ರೀಜಿಯವರ ಸರಳ ಜೀವನ ಮತ್ತು ಗಾಂಧೀಜಿಯವರ ನಿಲುವುಗಳನ್ನು ಉದಾಹರಣೆ ಸಹಿತ ವಿವರಿಸಿದರು.

ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ಡಾ.ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಗಾಂಧೀಜಿ ಹಾಗೂ ಅಂಬೇಡ್ಕರ್ ಚಿಂತನೆಗಳನ್ನು ಒಟ್ಟೊಟ್ಟಾಗಿ ನೋಡಿ ಸಮನ್ವಯಗೊಳಿಸಿಕೊಳ್ಳಬೇಕಾದ ಅಗತ್ಯತೆ, ಅನಿವಾರ್ಯತೆ ಇದೆ. ಇಬ್ಬರನ್ನೂ ಪ್ರತ್ಯೇಕಿಸಿ, ಚಿಂತನೆ ಮಾಡುವುದು ಸರಿಯಲ್ಲ ಎಂದರು.

ಹಿರಿಯ ನಾಗರಿಕರ ವೇದಿಕೆಯ ಅಧ್ಯಕ್ಷ ಗುರು ಮೂರ್ತಿ ಅವರು, ಲಾಲ್ ಬಹದ್ದೂರು ಶಾಸ್ತ್ರಿಯವರ ಸರಳತೆಯ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಸವರಾಜ್ ಒಡೆಯರ್ ಮಾತನಾಡಿ, ಡಾ. ಎಂ.ಎಸ್.ಸ್ವಾಮಿನಾಥನ್ ಅವರನ್ನು ಈ ಕ್ಷಣದಲ್ಲಿ ನೆನಪಿಸಬೇಕು ಎಂದು ಅವರ ಹಸಿರು ಕ್ರಾಂತಿಯ ಬಗ್ಗೆ ತಿಳಿಸಿ, ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಮಂಜುಳಾ ಬಸವಲಿಂಗಪ್ಪ, ಶಿವಾನಂದ ಗುರೂಜಿ, ಮಧುಸೂದನ್, ಅಜ್ಜಂಪುರ ಶೆಟ್ರು ಮೃತ್ಯುಂಜಯ, ಶರಣ ಸಾಹಿತ್ಯ ಪರಿಷತ್ತಿನ ಪರಮೇಶ್ವರಪ್ಪ, ಆವರಗೆರೆ ರುದ್ರಮುನಿ ಮುಂತಾದವರಿದ್ದರು.

ಬಿ.ಟಿ. ಪ್ರಕಾಶ್ ಸುಶ್ರಾವ್ಯವಾಗಿ ವಚನ ಗಾಯನ ಮಾಡಿದರು. ಎ.ಎಂ. ಕೊಟ್ರೇಶ್ವರ್ ಸ್ವಾಗತಿಸಿದರು.


ಕರಾವಳಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ.,
'ಕರಾವಳಿ ಸೌಧ', ಕುಂದುವಾಡ ರಸ್ತೆ, ಡಾ.ಶ್ಯಾಮಸುಂದರ್ ಬಂಟರ ಭವನದ ಎದುರು, ದಾವಣಗೆರೆ.
ದೂರವಾಣಿ : 99008 70019, 98441 11334.

ದಿನಾಂಕ 01-10-2023 ರಿಂದ ಎಲ್ಲಾ ಆಸ್ತಿ ಆಧಾರಿತ ಸಾಲಗಳ ಮೇಲಿನ ಬಡ್ಡಿ ದರವನ್ನು ಶೇ.13 ಕ್ಕೆ ಇಳಿಸಲಾಗಿದೆ.

ಉತ್ತಮ ಆದಾಯದ ಮೂಲವನ್ನು ಹೊಂದಿರುವ ಗ್ರಾಹಕರು ಆಸ್ತಿ ಆಧಾರಿತ ಸಾಲಕ್ಕಾಗಿ ಮೇಲಿನ ವಿಳಾಸದಲ್ಲಿ ಸಂಪರ್ಕಿಸಬೇಕಾಗಿ ವಿನಂತಿ.



ನಮ್ಮ ಕ್ಯಾನ್ಸರ್ ಮತ್ತು ಕಿಡ್ನಿ ಸ್ಪೆಷಲಿಸ್ಟ್‌ರಿಂದ ಸಮಾಲೋಚನೆ

ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ

• ಮೆಡಿಕಲ್ ಆಂಕೊಲಾಜಿಸ್ಟ್
ಡಾ|| ನಮ್ರತಾ ಉಡುಪ:
ಪ್ರತಿ ಗುರುವಾರ
ಡಾ|| ಈರಪ್ಪ ಮದಭಾವಿ:
ಪ್ರತಿ ಶನಿವಾರ

• ಕಿಡ್ನಿ (ಮೂತ್ರಪಿಂಡ ಶಾಸ್ತ್ರಜ್ಞರು) ತಜ್ಞರು
ಡಾ|| ಹರೀಶ್ ಕೆ ಆರ್:
ಪ್ರತಿ ಗುರುವಾರ

• ಸರ್ಜಿಕಲ್ ಆಂಕೊಲಾಜಿಸ್ಟ್
ಡಾ|| ನಿಶ್ಚಲ್ – ಸೋಮವಾರದಿಂದ ಶನಿವಾರದ ವರೆಗೆ

• ರೇಡಿಯೇಷನ್ ಆಂಕೊಲಾಜಿಸ್ಟ್
ಡಾ|| ಶರಶ್ಚಂದ್ರ – ಪ್ರತಿ ತಿಂಗಳ 2ನೇ ಮತ್ತು 4ನೇ ಗುರುವಾರ




ಮಾಗನೂರು ಬಸಪ್ಪ ರಸ್ತೆ, ತರಳಬಾಳು ಲೇಔಟ್, ದಾವಣಗೆರೆ 08192-260111 / 7022260111



ಜಿಎಂ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ
ಆಡಳಿತ ಕಛೇರಿ: #652, ಸೂರಜ್ ಆರ್ಕೇಡ್, ಮಂಡಿಪೇಟೆ, ದಾವಣಗೆರೆ-01. MSB
Ph: 08192-295511 E-Mail: headoffice@gmsouharda.org
ನೋಂದಣಿ ಸಂಖ್ಯೆ: ಆರ್.ಎಸ್.ಆರ್./ಸೌಕಾ/41/113/2008–09

ನಮ್ಮ ಸಹಕಾರಿಯ ಭೀಮಸಮುದ್ರ (ಚಿತ್ರದುರ್ಗ ಜಿಲ್ಲೆ), ಸಂಗೂರು (ಹಾವೇರಿ ಜಿಲ್ಲೆ), ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ಚನ್ನಗಿರಿ ಹಾಗೂ ಮಲ್ಲೇಶ್ವರಂ ಬೆಂಗಳೂರು ಶಾಖೆಗಳಲ್ಲಿ ಕೆಲಸ ನಿರ್ವಹಿಸಲು ಖಾಲಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ,

ನೇರ ಸಂದರ್ಶನ ಪ್ರಕ್ರಿಯೆ–ಪ್ರಕಟಣೆ

| ಖಾಲಿ ಹುದ್ದೆ | ವಿದ್ಯಾರ್ಹತೆ |
|---|---|
| ಸಿಸ್ಟಮ್ ಅಡ್ಮಿನಿಸ್ಟ್ರೇಟರ್ (System Administrator for CBS ) | M.Sc; cs, BE; cs, MCA |
| ಕಿರಿಯ ಲೆಕ್ಕಾಧಿಕಾರಿಗಳು (Junior Accountants) | B.sc, B.Com, BCA, BBM, BBA |
| ವಾಹನ ಚಾಲಕ (Driver) | ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು |

ಷರತ್ತುಗಳು : 1) ಎಲ್ಲಾ ಹುದ್ದೆಗಳಿಗೆ ಕಂಪ್ಯೂಟರ್ ಅನುಭವ ಕಡ್ಡಾಯ (ವಾಹನ ಚಾಲಕನ ಹುದ್ದೆಗೆ ಹೊರತುಪಡಿಸಿ). 2) ಸಿಸ್ಟಮ್ ಅಡ್ಮಿನಿಸ್ಟ್ರೇಟರ್ (System Administrator for CBS) ಹುದ್ದೆಗೆ ಅರ್ಜಿ ಸಲ್ಲಿಸುವವರು ಕಂಪ್ಯೂಟರ್ ಕ್ಷೇತ್ರದಲ್ಲಿ 3 ವರ್ಷಗಳ ಅನುಭವ ಹೊಂದಿರಬೇಕು. 3) ಚಾಲಕ ಹುದ್ದೆಗೆ ಅರ್ಜಿ ಸಲ್ಲಿಸುವವರು ನಾಲ್ಕು ಚಕ್ರದ ಚಾಲನಾ ಪರವಾನಗಿ ಹೊಂದಿರಬೇಕು. (Four Wheeler Driving Licence) ಹಾಗೂ ವಾಹನ ಚಾಲನೆಯಲ್ಲಿ 3 ವರ್ಷದ ಅನುಭವ ಹೊಂದಿರಬೇಕು. 4) ವಯೋಮಿತಿಯನ್ನು ನಮ್ಮ ಬೈಲಾದಲ್ಲಿರುವಂತೆ ಪರಿಗಣಿಸಲಾಗುವುದು ಮತ್ತು ಸಹಕಾರಿ/ಸೌಹಾರ್ದ ಸಂಘಗಳಲ್ಲಿ ಹೆಚ್ಚಿನ ಸೇವೆ ಸಲ್ಲಿಸಿದವರಿಗೆ ರಿಯಾಯಿತಿ ನೀಡಲಾಗುವುದು. 5) ಆಡಳಿತ ಮಂಡಲಿ ಈ ಬಗ್ಗೆ ವಿಧಿಸಬಹುದಾದ ಇತರೆ ಷರತ್ತುಗಳು.

ಆಸಕ್ತರು ತಮ್ಮ ಇತ್ತೀಚಿನ ಭಾವಚಿತ್ರದೊಂದಿಗೆ (Photo) ಸ್ವ-ವಿವರಗಳನ್ನು (Bio-data) ಹಾಗೂ ಮೂಲ ದಾಖಲೆಗಳ ಪ್ರತಿಗಳನ್ನು ದಿನಾಂಕ: 02–11–2023ರ ಗುರುವಾರದಂದು ಸಂಜೆ 5 ಗಂಟೆಯೊಳಗಾಗಿ ನಮ್ಮ ಸಹಕಾರಿಯ ಆಡಳಿತ ಕಛೇರಿಯ ವಿಳಾಸಕ್ಕೆ ಮುದ್ದಾಂ ಅಥವಾ ಅಂಚೆ ಮೂಲಕ ಕಳುಹಿಸುವುದು. ಅಭ್ಯರ್ಥಿಯು ಪೂರ್ಣ ವಿಳಾಸ, ಇ–ಮೇಲ್ ಹಾಗೂ ಮೊಬೈಲ್ ಸಂಖ್ಯೆಯನ್ನು ನೀಡುವುದು ಕಡ್ಡಾಯ. ಅರ್ಜಿಗಳನ್ನು ಪರಿಶೀಲಿಸಿದ ನಂತರದಲ್ಲಿ "ನೇರ ಸಂದರ್ಶನದ" ದಿನಾಂಕವನ್ನು ನಿಗದಿಪಡಿಸಿ, ಅರ್ಹ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಅಧ್ಯಕ್ಷರು
ಸಹಿ/– ಉಪಾಧ್ಯಕ್ಷರು
ಸಹಿ/– ಪ್ರಧಾನ ವ್ಯವಸ್ಥಾಪಕರು